ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜುಲೈ 2014 ಮಾಸ ಪತ್ರಿಕೆ

ಸಂಪುಟ : 36
ಸಂಚಿಕೆ : 10
ಪುಟ : 12
ಬೆಲೆ : ₹ 5/-


# ಭಾರತ ಬಿಟ್ಟು ತೊಲಗಿ

QUIT INDIA

ಬ್ರಿಟೀಷರು



ತೊಲಗಿದರು





A Journal of Karnataka State Secondary Teachers' Association

# ಸಂಪಾದಕೀಯ

- ಭಾರತದ ಸ್ವಾತಂತ್ರ್ಯಕ್ಕಾಗಿ ಅನೇಕ ಚಳುವಳಿಗಳು ನಡೆದವು. ಹಾಗೆ ನಡೆದ ಚಳುವಳಿಗಳಲ್ಲಿ "ಬ್ರಿಟಿಷರೇ, ಭಾರತವನ್ನು ಬಿಟ್ಟು ತೊಲಗಿ (ಕ್ವಿಟ್ ಇಂಡಿಯಾ) ಚಳುವಳಿ ಪ್ರಮುಖವಾದುದು. ಪರಿಣಾಮವಾಗಿ ಈ ಚಳುವಳಿ ನಡೆದ ಐದು ವರ್ಷಗಳ ನಂತರ ಬ್ರಿಟಿಷರು ಭಾರತವನ್ನು ಬಿಟ್ಟು ಹೊರಟರು. ಆದರೆ ಸ್ವಾತಂತ್ರ್ಯ ಬಂದು 67 ವರ್ಷಗಳು ಕಳೆದರೂ ಭಾರತಕ್ಕೆ ಅಂಟಿಕೊಂಡಿರುವ "ಭ್ರಷ್ಟಾಚಾರ" ವೆಂಬ ಜಾಡ್ಯ ತೊಲಗಲಿಲ್ಲ. ಬದಲಾಗಿ ದಿನೇದಿನೇ ಎಲ್ಲೆಡೆ ವ್ಯಾಪಕವಾಗಿ ಹರಡುತ್ತಲೇ ಇದೆ. ಭ್ರಷ್ಟಾಚಾರವನ್ನು ತೊಲಗಿಸುವ ಚಳುವಳಿ ಅಲ್ಲಲ್ಲಿ ಕಂಡುಬಂದರೂ ಪರಿಣಾಮ ಬೀರಿಲ್ಲ. ಇನ್ನು ಮುಂದಾದರೂ ಈ ಜಾಡ್ಯ ತೊಲಗಬಹುದೆಂಬ ಆಶಾಕಿರಣ ಈಗ ಗೋಚರಿಸುತ್ತಿದೆ. ಬ್ರಿಟಿಷರಂತೆ ಭ್ರಷ್ಟಾಚಾರವೂ ಬಹಳ ಬೇಗ ದೇಶದಿಂದ ಹೋಗುವ ದಿನವನ್ನು ನಿರೀಕ್ಷಿಸೋಣ.
- ಸ್ತ್ರೀಯರನ್ನು ಸಹೋದರಿಯರೆಂದು ಗೌರವಿಸಿ, ರಕ್ಷಿಸುವ ದಿನ 'ರಕ್ಷಾ ಬಂಧನ'. ಈಗ ದೇಶದ ಎಲ್ಲೆಡೆ ನಡೆಯುತ್ತಿರುವ ಘಟನೆಗಳನ್ನು ಗಮನಿಸಿದರೆ ರಕ್ಷಾಬಂಧನ ದಿನವನ್ನು ವ್ಯಾಪಕವಾಗಿ ಎಲ್ಲೆಡೆ ಆಚರಿಸುವುದು ಅತ್ಯಂತ ಅಗತ್ಯವೆನಿಸುತ್ತದೆ. ಇದು ವ್ಯಕ್ತಿಯಲ್ಲಿರುವ ರಾಕ್ಷಸೀ ಪ್ರವೃತ್ತಿಯನ್ನು ಹೋಗಲಾಡಿಸಲು ನೆರವಾಗುತ್ತದೆ. ಆಗಸ್ಟ್ 10 ನೇ ತಾರೀಖು ಎಲ್ಲರೂ ಕೂಡಿ ರಕ್ಷಾಬಂಧನ ಕಾರ್ಯಕ್ರಮವನ್ನು ಆಚರಿಸುವುದರ ಮೂಲಕ ನಮ್ಮ ಸಹೋದರಿಯರ ರಕ್ಷಣೆಗೆ ಪಣತೊಡುವ ಕೆಲಸ ಅತ್ಯಗತ್ಯವಾಗಿ ಮಾಡಬೇಕಾಗಿದೆ.
- ಜಗತ್ತಿನ ಪ್ರಾಚೀನ ಭಾಷೆಗಳಲ್ಲಿ ಸಂಸ್ಕೃತಕ್ಕೆ ಅಗ್ರಸ್ಥಾನ. ಎಲ್ಲ ಭಾಷೆಗಳಿಗೂ ಸಂಸ್ಕೃತ ಮಾತೃಭಾಷೆ ಎಂದು ಪರಿಗಣಿತವಾಗಿದೆ. ವೇದ, ಪುರಾಣ, ಉಪನಿಷತ್ತುಗಳಲ್ಲದೇ ಬಹಳಷ್ಟು ಶ್ರೇಷ್ಠ ಸಾಹಿತ್ಯ ರಚನೆ ಸಂಸ್ಕೃತ ಭಾಷೆಯಲ್ಲಾಗಿದೆ. ಈಗ ಆಡು ಭಾಷೆಯಾಗಿ, ವ್ಯಾವಹಾರಿಕ ವಾಗಿ ಜನಮನದಿಂದ ದೂರವಾಗಿದ್ದರೂ ಸಂಸ್ಕೃತ ತನ್ನದೇ ಆದ ಮಹತ್ವ, ಗೌರವ ಸ್ಥಾನವನ್ನು ಪಡೆದಿದೆ. ಸಂಸ್ಕೃತ ದಿನವಾದ ಆಗಸ್ಟ್ 10 ರಂದು ಸಂಸ್ಕೃತ ಭಾಷೆಯನ್ನು ಗೌರವಿಸುವುದು, ಬೆಳೆಸಲು ಸಂಕಲ್ಪಿಸಿ ಪ್ರಯತ್ನಿಸುವುದು ಅಗತ್ಯ.
- ಜಪಾನಿನ ನಾಗಸಾಕಿ, ಹಿರೋಷಿಮ ಪಟ್ಟಣಗಳ ಮೇಲೆ ಬಾಂಬ್ ದಾಳಿ ನಡೆದು ಎರಡೂ ಪಟ್ಟಣಗಳು ಸಂಪೂರ್ಣವಾಗಿ ನಾಶವಾದುದು ಎಲ್ಲರಿಗೂ ತಿಳಿದ ವಿಷಯವೇ. ಆದರೆ ಜಪಾನೀಯರ ಉತ್ಸಾಹ, ಶ್ರದ್ಧೆ, ಪ್ರಾಮಾಣಿಕತೆ, ದೇಶಾಭಿಮಾನ, ನಿರಂತರ ದುಡಿಮೆ ಗಳಿಂದಾಗಿ ಅಲ್ಪ ಕಾಲದಲ್ಲಿಯೇ ಚೇತರಿಸಿಕೊಂಡು ಜಗತ್ತಿನಲ್ಲಿ ತನ್ನದೇ ಆದ ವಿಶಿಷ್ಟ ಸಾಧನೆಗಳಿಂದಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಜಪಾನೀಯರ ಸಾಧನೆ, ಕರ್ತವ್ಯಪರತೆ, ಪ್ರಾಮಾಣಿಕತೆ, ದೇಶಭಕ್ತಿ ನಮಗೆ ಸ್ಫೂರ್ತಿಯನ್ನು ನೀಡಿದಲ್ಲಿ ಭಾರತವೂ ಮತ್ತೆ ತನ್ನ ವಿಶಿಷ್ಟ ಸಾಧನೆ ತೋರುವುದರಲ್ಲಿ ಸಂದೇಹವಿಲ್ಲ. ಆ ದಿನ ಬೇಗ ಬರಲಿ ಎಂದು ಆಶಿಸೋಣ.

ಸಂಪಾದಕ

## ಬುದ್ಧ ಸೂಕ್ತಿ



ತನ್ನನ್ನೇ ತಾನು ಗೆದ್ದವನು ಸಾವಿರ ವೈರಿಗಳನ್ನು ಜಯಿಸಿದವನಿಗಿಂತಲೂ ಮಿಗಿಲಾದ ವೀರ.
ತನ್ನ ಇಂದ್ರಿಯಗಳಿಗೆ ದಾಸನಾಗಿರುವುವವನಿಗಿಂತ ಅವನು ಸಾವಿರ ಪಾಲು ಶಕ್ತಿಶಾಲಿ.

## ಪರಿವಿಡಿ


- ರಾಷ್ಟ್ರೀಯ ಕಾರ್ಯಾಗಾರ 3
- ರಕ್ಷಾ ಬಂಧನ್ 4
- 101% ಏನದು ! ಹೇಗೆ! 5
- ಭಾರತ ಬಿಟ್ಟು ತೊಲಗಿ ಚಳವಳಿ 6
- ಅಭಿವೃದ್ಧಿ ಓಟಕ್ಕೆ ನಾವೇಕೆ ಹೆಜ್ಜೆ ಹಾಕುತ್ತಿಲ್ಲ ? 7
- ಕಮಲಾದೇವಿ ಚಟ್ಟೋಪಾಧ್ಯಾಯ 8
- ಒಂದು ಸಂಸ್ಕೃತ ದಿನಾಚರಣೆ 9
- ವಿದ್ಯಾರ್ಥಿ ಮಿತ್ರ 10
- ಜೀವನ ಮೌಲ್ಯಗಳು 11
- ದೆಹಲಿ ಚಿತ್ರ ಸುದ್ದಿ 12

# ರಾಷ್ಟ್ರೀಯ ಕಾರ್ಯಾಗಾರ : ಶಾಶ್ವತ ಜೀವನ ಮೌಲ್ಯಗಳು



**ಶ್ರೀಮತಿ ಮಮತಾ ಡಿ.ಕೆ.**
**ಸಹಶಿಕ್ಷಕಿ ಸರ್ಕಾರಿ ಪ್ರೌಢಶಾಲೆ, ಅತ್ತಿಹಳ್ಳಿ**

ಆಷಾಢ ಕೃಷ್ಣ ತೃತೀಯ ವಿಕ್ರಮ ಶಕೆ 2071–15 ಜೂನ್ 2014ರ ರವಿವಾರದಂದು ಮಹಾಶಯ ಚುನ್ನೀಲಾಲ್ ಸರಸ್ವತಿ ಬಾಲಮಂದಿರ, ಎಲ್ ಬ್ಲಾಕ್, ಹರಿನಗರ, ದಿಲ್ಲಿಯಲ್ಲಿ ಶಾಶ್ವತ ಜೀವನ ಮೌಲ್ಯಗಳು ಎಂಬ ವಿಷಯದ ಬಗ್ಗೆ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ, ದಿಲ್ಲಿ ಇವರಿಂದ ರಾಷ್ಟ್ರೀಯ ಕಾರ್ಯಾಗಾರ ಏರ್ಪಾಡಾಗಿತ್ತು. ಕರ್ನಾಟಕದಿಂದ ಹನ್ನೆರೆಡು ಜನ ಶಿಕ್ಷಕರ ಗುಂಪು ಈ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಭಾಗವಹಿಸಲು ದಿನಾಂಕ 11.06.2014 ರಂದು ದಿಲ್ಲಿಗೆ ಪ್ರಯಾಣ ಬೆಳೆಸಿತು. ಈ ಕಾರ್ಯಾಗಾರದಲ್ಲಿ ದೇಶದ ಅನೇಕ ರಾಜ್ಯಗಳಿಂದಲೂ ಪ್ರತಿನಿಧಿಗಳು ಬಂದಿದ್ದರು. ದಿನಾಂಕ 15.06.2014ರ ರವಿವಾರದಂದು 08.30–10.00 ಘಂಟೆಯವರೆಗೆ ನಡೆದ ಪ್ರಥಮ ಸಭೆಯಲ್ಲಿ ಡಾ॥ ಕೃಷ್ಣ ಗೋಪಾಲ್‌ರವರು ಸ್ವಾತಂತ್ರ್ಯ ಸಿಗುವುದಕ್ಕಿಂತ ಮೊದಲು ದೇಶ ಗುಲಾಮಗಿರಿಯ ಕಷ್ಟದಲ್ಲಿತ್ತು. ಸ್ವಾತಂತ್ರ್ಯಾನಂತರ ದೇಶ ಮತ್ತನೇಕ ಕಷ್ಟಗಳನ್ನು ಎದುರಿಸುತ್ತಿದೆ. ಜನಜೀವನದಲ್ಲಿ ಮೌಲ್ಯಗಳು ಇಲ್ಲದಂತಾಗಿವೆ. ಶಾಶ್ವತ ಮೌಲ್ಯಗಳೆಂದರೆ ಯಾವುವು? ದೇಶಕ್ಕಾಗಿ ಒಳ್ಳೆಯ ಮೌಲ್ಯಗಳಾವುವು? ಎಂಬುದನ್ನು ಮತ್ತೊಮ್ಮೆ ನಾವೆಲ್ಲರೂ ಯೋಚಿಸಬೇಕಾಗಿ ಬಂದಿದೆ ಎಂದು ಹೇಳಿದರು. ಶಾಶ್ವತ ಮೌಲ್ಯಗಳೆಂದರೆ ಚಿರಂತನವಾದ, ನಿರಂತರವಾದ ಮೌಲ್ಯಗಳೆಂದು ಹೇಳಬಹುದೆಂದು ಹೇಳಿದರು. ಭಾರತೀಯ ಪರಂಪರೆ ಪಾಶ್ಚತ್ಯ ಪರಂಪರೆಗಿಂತ ಭಿನ್ನವಾಗಿ ಒಳ್ಳೆಯ ಮೌಲ್ಯಗಳಿಂದೊಡಗೂಡಿದೆ. ಆದ್ದರಿಂದ ಭಾರತೀಯರು ಪಾಶ್ಚಾತ್ಯ ಪರಂಪರೆಗೆ ಆಕರ್ಷಿತರಾಗದೇ ಭಾರತೀಯ ಪರಂಪರೆ ಮತ್ತು ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳ ಬೇಕಾಗಿದೆಯೆಂದು ಹೇಳಿದರು. ಬಂಕಿಮಚಂದ್ರ ಚಟರ್ಜಿಯವರು ತಮ್ಮ ಜೀವನದಲ್ಲಿ ಹೇಗೆ ತಂದೆ, ತಾಯಿ ಮತ್ತು ಗುರುಗಳಿಗೆ ಮಹತ್ವವನ್ನು ನೀಡಿದರೆಂಬುದನ್ನು ಅನೇಕ ಉದಾಹರಣೆಗಳನ್ನು ನೀಡುವುದರ ಮೂಲಕ ತಿಳಿಸಿದರು. ಶಿಕ್ಷಕರು ವಿದ್ಯಾರ್ಥಿಗಳನ್ನು ಸಾಧಕರನ್ನಾಗಿ ಮಾಡಿ ಅವರ ಜೀವನದಲ್ಲಿ ಏನಾದರೂ ಒಳ್ಳೆಯದನ್ನು ಸಾಧಿಸುವಂತೆ ಅವರನ್ನು ತಯಾರು ಮಾಡುತ್ತೇವೆಂಬ ಪ್ರತಿಜ್ಞೆ ಮಾಡಬೇಕು ಮತ್ತು ಆ ಮಾರ್ಗದಲ್ಲಿ ಶಿಕ್ಷಕರು ಸಾಧಕರಾಗಿ ಸಾಗಬೇಕೆಂದು ತಿಳಿಸಿದರು. ಮೌಲ್ಯಗಳೆಲ್ಲವೂ ಹೃದಯದಲ್ಲಿರುತ್ತವೆಯೇ ಹೊರತು, ಮಸ್ತಿಷ್ಕದಲ್ಲಿರುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಕರು ತಮ್ಮ ಕಾರ್ಯನಿರ್ವಹಿಸಿದಾಗ ಅವರು ಯಶಸ್ಸಿನ ಅತ್ಯುನ್ನತ ಶಿಖರವನ್ನೇರಬಹುದೆಂದು ತಿಳಿಸಿದರು.

ನಂತರ 10.30 ರಿಂದ ದ್ವಿತೀಯ ಭಾಗದಲ್ಲಿ ಪುನರುತ್ಥಾನ ವಿದ್ಯಾಪೀಠದ ಸಂಚಾಲಿಕೆಯಾದ ಮಾ। ಇಂದುಮತಿ ಕಾಟಕರೆಯವರು ಶಿಕ್ಷಕ ವೃತ್ತಿಗೆ ಬರುವ ಅಭ್ಯರ್ಥಿಗಳು ಪ್ರಾರಂಭದಲ್ಲಿ ಶಿಕ್ಷಕರಾಗಿರುತ್ತಾರೆ, ಜೀವಮಾನವಿಡೀ ಕೇವಲ ಶಿಕ್ಷಕರಾಗಿರದೇ ಆಚಾರ್ಯರಾಗುವುದು ಹೇಗೆ? ಎಂಬುದರ ಬಗ್ಗೆ ಚರ್ಚೆ ಮಾಡಲು ಪ್ರಾರಂಭಿಸಿದರು. ಶಿಕ್ಷಕರು ಕಛೇರಿಯ ಯಾವುದೇ ಅಧಿಕಾರಿಗಳಿಗೆ ಹೆದರಿ ಅವರ ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ತಮ್ಮ ಅಂತರಾತ್ಮದ ಪ್ರಶ್ನೆಗಳಿಗೆ ಉತ್ತರಿಸಬೇಕೆಂದು ಹೇಳಿದರು. ಆಡಳಿತಾಧಿಕಾರಿಗಳಿಗೆ ಹೆದರಿಕೊಂಡು ತಮ್ಮ ವೃತ್ತಿಯನ್ನು ನಿರ್ವಹಿಸುವ ಬದಲು ತಮ್ಮ ಅಂತರಾತ್ಮಕ್ಕೆ ಹೆದರಿ ಕೆಲಸ ಮಾಡಿದಾಗಲೇ ಅವರು ಆತ್ಮತೃಪ್ತಿಯಿಂದ ಆಚಾರ್ಯರಾಗಲು ಸಾಧ್ಯವೆಂದು ತಿಳಿಸಿದರು. ಅನೇಕ ರಾಜ್ಯದಿಂದ ಬಂದ ಪ್ರತಿನಿಧಿಗಳು ಆಚಾರ್ಯರಾಗುವುದು ಹೇಗೆ ಎಂಬುದರ ಬಗ್ಗೆ ತಮ್ಮ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಈ ಅಭಿಪ್ರಾಯದ ಹಂಚಿಕೆಯಲ್ಲಿ ನಾನೂ ಸಹ ಸಕ್ರಿಯವಾಗಿ ಭಾಗವಹಿಸಿ ಶಿಕ್ಷಕರು ಸ್ವಾಧ್ಯಾಯ, ಸದಾಚರಣೆ, ಒಳ್ಳೆಯ ಕೃತಿತ್ವಗಳಿಂದ ಶಿಕ್ಷಕರಿಂದ ಆಚಾರ್ಯರಾಗಬಹುದೆಂಬ ನನ್ನ ಅಭಿಪ್ರಾಯವನ್ನು ಸಭೆಗೆ ತಿಳಿಸಿದೆನು.

ಅನೇಕ ಶಿಕ್ಷಕರು ನೀಡಿದ ಅಭಿಪ್ರಾಯಗಳಲ್ಲಿ ಪ್ರಮುಖವಾದವುಗಳೆಂದರೆ 1. ಸ್ವಾಧ್ಯಾಯ, 2. ಸದಾಚರಣೆ, 3. ಆತ್ಮವಿಶ್ವಾಸ, 4. ಸಕಾರಾತ್ಮಕ ಯೋಚನೆ ಮತ್ತು ಯೋಜನೆ, 5. ಆಯಾ ಕಾಲಕ್ಕೆ ತಕ್ಕಂತೆ ತಮ್ಮ ಯೋಚನೆ ಮತ್ತು ಕಾರ್ಯವೈಖರಿಯನ್ನು ಬದಲಾಯಿಸಿಕೊಳ್ಳುವುದು, 6. ಮಾತು ಮತ್ತು ಕಾರ್ಯಗಳಲ್ಲಿ ವ್ಯತ್ಯಾಸವಿಲ್ಲದಿರುವುದು, 7. ಸ್ವಾರ್ಥ ಭಾವವನ್ನು ತೊರೆದು ಸಮರ್ಪಣಾ ಭಾವದಿಂದ ಅಧ್ಯಾಪನ ಕಾರ್ಯವನ್ನು ಕೈಗೊಳ್ಳುವುದು ಮುಂತಾದುವು.

ಈ ವಿಚಾರದ ಜೊತೆಗೆ ಶಿಕ್ಷಕರಾಗಲೀ, ವಿದ್ಯಾರ್ಥಿಗಳಾಗಲೀ ತಮ್ಮ ತಮ್ಮ ಮನಸ್ಸನ್ನು ಹೇಗೆ ಸಂಯಮದಿಂದ ಇಟ್ಟುಕೊಳ್ಳಬೇಕೆಂಬುದರ ಬಗ್ಗೆಯೂ ಸವಿಸ್ತಾರವಾದ ಚರ್ಚೆ ನಡೆಯಿತು. ಶಿಕ್ಷಕರಲ್ಲಿ ನಾಲ್ಕು ವಿಧದ ಶಿಕ್ಷಕರಿರುತ್ತಾರೆ. 1. ವಿಷಯ ಶಿಕ್ಷಕರು 2. ವಿದ್ಯಾರ್ಥಿಗಳ ಶಿಕ್ಷಕರು 3. ರಾಷ್ಟ್ರೀಯ ಶಿಕ್ಷಕರು 4. ವೇತನದ ಶಿಕ್ಷಕರು. ನಾವೆಲ್ಲರೂ ಶಿಕ್ಷಕರಿಂದ ಆಚಾರ್ಯರಾಗಬೇಕಾದರೆ ನಾಲ್ಕನೆಯದನ್ನು ಹೊರತುಪಡಿಸಿ

**ಪುಟ 4 ಕ್ಕೆ ➤**

➢ ಪುಟ 3 ರಿಂದ..... **ಗುರುಪೂರ್ಣಿಮೆ**

ಮೇಲಿನ ಮೂರು ಬಗೆಯ ಶಿಕ್ಷಕರಾದರೆ ಆಚಾರ್ಯರಾಗಲು ಸಾಧ್ಯವಾಗಬಹುದೆಂದು ಹೇಳಿದರು.

ನಂತರ 1.00 ಘಂಟೆಗೆ ಶ್ರೀಯುತ ಅಮೃತ್‌ಜೀರವರು ಶಾಶ್ವತ ಜೀವನ ಮೌಲ್ಯ ಗಳನ್ನು ನಾವೆಲ್ಲಾ ಹೇಗೆ ವಿದ್ಯಾರ್ಥಿಗಳಲ್ಲಿ ಅಳವಡಿಸಬೇಕೆಂಬ ವಿಷಯದ ಬಗ್ಗೆ ಚರ್ಚೆ ನಡೆಸಿದರು.

ಅನೇಕ ರಾಜ್ಯಗಳಿಂದ ಬಂದ ಅನೇಕ ಪ್ರತಿನಿಧಿಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಸಭೆಗೆ ತಿಳಿಸಿದರು.

ನಾನೂ ಸಹ ನನ್ನ ಅಭಿಮತವನ್ನು ತಿಳಿಸುತ್ತಾ ಶಾಲಾ ವಾತಾವರಣವನ್ನು ನಾವು ಮೂರು ವಿಭಾಗಗಳಲ್ಲಿ ವಿಭಾಗಿಸಬಹುದು. 1. ಶಿಕ್ಷಕರು 2. ಪಾಲಕರು 3. ವಿದ್ಯಾರ್ಥಿ. ಶಾಲಾ ವಾತಾವರಣದಲ್ಲಿ ಶಾಶ್ವತ ಜೀವನ ಮೌಲ್ಯಗಳನ್ನು ಅಳವಡಿಸಬೇಕಾದರೆ ಮೊದಲನೆಯದಾಗಿ ಶಿಕ್ಷಕರು ತಮ್ಮ ಜೀವನದಲ್ಲಿ ಶಾಶ್ವತ ಜೀವನ ಮೌಲ್ಯಗಳನ್ನು ಅಳವಡಿಸಿ ಕೊಳ್ಳಬೇಕು. ನಂತರ ತಿಂಗಳಿಗೊಮ್ಮೆ ಪಾಲಕರ ಸಭೆ ನಡೆಸಿ ಅವರಲ್ಲಿ ಶಾಶ್ವತ ಜೀವನ ಮೌಲ್ಯಗಳನ್ನು ತರಲು ಪ್ರಯತ್ನಿಸಬೇಕು. ನಂತರ ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬ ಶಿಕ್ಷಕರು ತಿಂಗಳಿಗೊಂದು ಮೌಲ್ಯ ವನ್ನು ಆರಿಸಿಕೊಂಡು ಅದರ ಬಗ್ಗೆಯೇ ವಿದ್ಯಾರ್ಥಿಗಳು ಹೆಚ್ಚು ಚಿಂತನೆ ನಡೆಸುವಂತೆ ಅವಕಾಶವನ್ನು ಏರ್ಪಾಡು ಮಾಡಬೇಕು. ಹೀಗೆ ಮಾಡುವುದರಿಂದ ಶಾಲಾವಾತಾವರಣದಲ್ಲಿ ಶಾಶ್ವತ ಜೀವನ ಮೌಲ್ಯಗಳನ್ನು ಅಳವಡಿಸುವುದು ಸಾಧ್ಯವೆಂದು ನನ್ನ ಅಭಿಪ್ರಾಯವನ್ನು ತಿಳಿಸಿದೆನು. ಹಾಗೆಯೇ ನಮ್ಮ ಜೊತೆಯಲ್ಲಿಯೇ ಬಂದ ಕನ್ನಡ ಶಿಕ್ಷಕರಾದ ಶ್ರೀ ವಿಶ್ವೇಶ್ವರ ಭಟ್ ರವರ ತಮ್ಮ ಅಭಿಪ್ರಾಯವನ್ನು ಸಭೆಗೆ ತಿಳಿಸಿದರು. ಹೀಗೆ ಇನ್ನೂ ಅನೇಕ ಪ್ರಮುಖ ವಿಚಾರಗಳ ಚರ್ಚೆ ನಡೆಯಿತು. ಮಹೇಂದ್ರ ಕಪೂರ್‌ಜೀ ಯವರು ಎಲ್ಲರಿಗೂ ವಂದನೆಗಳನ್ನು ಹೇಳುವುದರ ಮೂಲಕ ಹಾಗೂ ವಂದೇ ಮಾತರಂ ಹಾಡುವ ಮೂಲಕ ಕಾರ್ಯಾಗಾರದ ಸಮಾಪ್ತಿಯನ್ನು ಮಾಡಿದರು. ●

# ರಕ್ಷಾ ಬಂಧನ್

✍ **ನಂ. ನಾಗಲಕ್ಷ್ಮೀ**

ಶ್ರಾವಣಮಾಸ ಬರುತ್ತಿದಂತೆ ಸಾಲುಸಾಲಾಗಿ ಬರುವ ಹಬ್ಬಗಳನ್ನು ಆಚರಿಸಲು ಸಂಭ್ರಮದ ಸಿದ್ಧತೆಯಲ್ಲಿ ತೊಡಗುತ್ತೇವೆ. ಪ್ರತಿಯೊಂದು ಹಬ್ಬವೂ ತನ್ನದೇ ಆದ ಸಾಂಸ್ಕೃತಿಕ, ಪೌರಾಣಿಕ, ಐತಿಹಾಸಿಕ ಮಹತ್ವವನ್ನು ಹೊಂದಿದ್ದು, ವಿಭಿನ್ನ ಸಂಪ್ರದಾಯ ಆಚರಣೆಯೊಂದಿಗೆ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ. ಅವುಗಳಲ್ಲಿ ಒಂದು 'ರಕ್ಷಾಬಂಧನ್' ಅಥವಾ 'ರಾಖಿ ಪೂರ್ಣಿಮಾ' ಅಥವಾ ಚಿಕ್ಕದಾಗಿ 'ರಾಖೀ' ಎಂದು ಆಚರಿಸುವ ಹಬ್ಬ.

ಪ್ರತಿವರ್ಷ ಹಿಂದೂ ಕ್ಯಾಲೆಂಡರಿನ ಪ್ರಕಾರ ಶ್ರಾವಣ ಪೌರ್ಣಿಮೆಯಂದು ಈ ಹಬ್ಬವನ್ನು ಆಚರಿಸಲಾಗುತ್ತದೆ. ಸೋದರ–ಸೋದರಿಯರ ಪರಸ್ಪರ ಪ್ರೀತಿ ಮತ್ತು ಕರ್ತವ್ಯಗಳನ್ನು ಸ್ಮರಿಸುವ ಪವಿತ್ರ ದಿನವಿದು. ಹಿಂದು, ಜೈನ ಮತ್ತು ಅನೇಕ ಸಿಖ್ ಸಮುದಾಯಗಳು ಪಾಲ್ಗೊಳ್ಳುವ ಈ ಹಬ್ಬವನ್ನು ಭಾರತ, ಮಾರಿಷಸ್, ನೇಪಾಳ ಅಲ್ಲದೆ ಪ್ರಪಂಚದಾದ್ಯಂತ ನೆಲೆಸಿರುವ ಬಹುತೇಕ ಹಿಂದುಗಳು ಆಚರಿಸುತ್ತಾರೆ.

ಶ್ರಾವಣ ಪೌರ್ಣಿಮೆಯಂದು ಬೆಳಗಿನ ವೇಳೆ ಸೋದರಿ ಪವಿತ್ರವಾದ ರಕ್ಷೆಯನ್ನು (ಒಂದು ದಾರ) ಸೋದರನ ಕೈಗೆ ಕಟ್ಟಿ ಅವನ ಜೀವನ ಸಕಲ ರೀತಿಗಳಲ್ಲೂ ಸಂತೋಷಕರ ವಾಗಿರಲೆಂದು ಅನುಗ್ರಹಿಸೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾಳೆ. ತನ್ನ ಕೈಯಾರೆ ಸಿಹಿ ತಿನ್ನಿಸುತ್ತಾಳೆ. ಪ್ರತಿಯಾಗಿ ಸೋದರನು ಆಜೀವ ಪರ್ಯಂತ ತಾನು ಅವಳ ರಕ್ಷಣೆ ಮಾಡುವುದಾಗಿ ಕಂಕಣಬದ್ಧನಾಗುತ್ತಾನೆ. ಸೋದರಿ ಅವನಿಗೆ ಆರತಿ ಬೆಳಗಿ ತಿಲಕವಿಟ್ಟು ನಂತರ ಕುಟುಂಬದ ಎಲ್ಲರೂ ಆ ಸಂಭ್ರಮದ ಕ್ಷಣಗಳನ್ನು ಹಂಚಿಕೊಳ್ಳುತ್ತಾರೆ. ಸೋದರಿಗೆ ಉಡುಗೊರೆ ನೀಡಿ ಆನಂದಿಸುತ್ತಾರೆ.

'ರಕ್ಷಾಬಂಧನ್' ಎಂದರೆ ರಕ್ಷಣೆಯ ಬಂಧವೆಂದೇ ಅರ್ಥ. ಈ ಹಬ್ಬಕ್ಕೆ ಹಲವು ದಿನಗಳ ಮೊದಲೇ ಹೆಣ್ಣುಮಕ್ಕಳು ಮನಸ್ಸಿಗೊಪ್ಪುವ 'ರಾಖಿಗಾಗಿ' ಹುಡುಕ ತೊಡಗುತ್ತಾರೆ. ಕೆಲವರು ಸ್ವತಃ ತಮ್ಮ ಕಲೆಗಾರಿಕೆಯಿಂದಲೇ ಸಿದ್ಧಪಡಿಸು ತ್ತಾರೆ. ಕೇವಲ ಒಡಹುಟ್ಟಿದವರಿಗೆ ಮಾತ್ರವಲ್ಲದೆ ಅಂತಹಾ ಸೋದರ ಭಾವನೆ ಹೊಂದಿರುವ ಇತರರೂ ಕೂಡ ಇಂತಹ ಪವಿತ್ರ ಸಂಬಂಧವನ್ನು ಮತ್ತೆ ಮತ್ತೆ ಗಟ್ಟಿಗೊಳಿಸಿಕೊಳ್ಳಲು, ಸ್ಥಾಪಿಸಿಕೊಳ್ಳಲು ಈ ಹಬ್ಬವನ್ನು ಆಚರಿಸುತ್ತಾರೆ. ಇತ್ತೀಚೆಗೆ ಆತ್ಮೀಯ ಗೆಳೆಯರು ಗೆಳತಿಯರು ಪರಸ್ಪರಿಗಾಗಿ ಹಾಗೂ ಹೆಣ್ಣುಮಕ್ಕಳು ದೇಶ ಕಾಯುವ ಸೈನಿಕರಿಗಾಗಿ ಆಡಳಿತ ನಡೆಸುವ ನಾಯಕರಿಗಾಗಿ ಇಂತಹ ರಾಖಿಗಳನ್ನು ಕಳುಹಿಸಿ ತಮ್ಮ ಸೋದರ ಭಾವನೆಯನ್ನು ವ್ಯಕ್ತಪಡಿಸುವುದು, ಪ್ರೀತಿಯನ್ನು ಹಂಚಿಕೊಳ್ಳುವುದೂ ಪ್ರಾರಂಭವಾಗಿದೆ.

'ರಕ್ಷಾಬಂಧನ್' ಕುರಿತು ನಮ್ಮಲ್ಲಿ ಅನೇಕ ಪೌರಾಣಿಕ, ಐತಿಹಾಸಿಕ ಕಥೆಗಳೂ ಲಭ್ಯವಿರುವುದೂ ಕೂಡ ಇದರ ವಿಶೇಷ.

**ಪೌರಾಣಿಕ-: ಉದಾ: ದ್ರೌಪತಿ– ಕೃಷ್ಣ, ಯಮ– ಯಮುನ, ಮಹಾಲಕ್ಷ್ಮಿ– ಬಲಿಚಕ್ರವರ್ತಿ**

**ಐತಿಹಾಸಿಕ:– ಅಲೆಗ್ಸಾಂಡರ್ ಪತ್ನಿ– ರಾಜಪೂರತ್, ರಜಪೂತ್ ರಾಣಿ ಕರ್ಣಾವತಿ– ಹುಮಾಯೂನ್** ●

# 101% ಏನದು ! ಹೇಗೆ!

(ಸಂಗ್ರಹ)
**ಶ್ರೀ ಜಿ.ಎಸ್ ಕೃಷ್ಣಮೂರ್ತಿ**
ಪೋಷಕರು & ಕಛೇರಿ ವ್ಯವಸ್ಥಾಪಕರು
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ



ಗಣಿತ ರೀತ್ಯಾ ಶೇ 101 ಅಸಾಧ್ಯ. ಏಕೆಂದರೆ ಶೇ 101 ಎಷ್ಟು ಪಡೆಯಬೇಕೋ ಅದಕ್ಕಿಂತ ಹೆಚ್ಚಿಗೆ ಪಡೆದಿದ್ದೇನೆ . ಇದು ವ್ಯಾವಹಾರಿಕವಾಗಿ ಸರಿಯೇ ವಿನಃ ಗಣಿತ ರೀತ್ಯಾ ಅಲ್ಲ.

ಯಾರಾದರೂ ನಾನು ಪರೀಕ್ಷೆಯಲ್ಲಿ ಶೇ. 101 ಅಂಕ ಪಡೆದಿದ್ದೇನೆ ಎಂದರೆ, ನೀವು ಅವರ ಹೇಳಿಕೆಯನ್ನು ನಂಬುತ್ತೀರಾ?

ಆದರೂ ಶೇ 101 ಗಳಿಸುವುದು ಹೇಗೆ ? ಪ್ರಯತ್ನಿಸೋಣ.

ಆಂಗ್ಲ ವರ್ಣಮಾಲೆಯ ಅಕ್ಷರಗಳನ್ನು ಗಮನಿಸಿ.. ಈ ಎಲ್ಲಾ ಅಕ್ಷರಗಳಿಗೂ 1,2, 3 ರಂತೆ ಸಂಖ್ಯಾ ಸೂಚಕವನ್ನು ಕೊಡೋಣ

A=1, B=2. C=3. D=4 . E= 5, F=6. G=7, H=8, I=9. . J=10. K=11. L=12 M=13, N=14, O=15. P=16. Q= 17. R=18,S=19, T=20, U=21, V=22. W=23. X=24, Y=25. Z=26

ಶೇ. 100 ಪಡೆಯಬೇಕಾದರೆ ನಮ್ಮ ಪ್ರಯತ್ನ

| | |
|---|---|
| **ಕಷ್ಟಪಟ್ಟು ಕೆಲಸ** | **H A R D W O R K** |
| ಸಮಾನಾಂತರ ಸಂಖ್ಯೆಗಳನ್ನು ಕೂಡಿ | 8+1+18+4+23+15+18+11=**98** |
| **ಜ್ಞಾನ** | **K N O W L E D G E** |
| ಮೇಲಿನಂತೆಯೇ | 11+14+15+23+12+5+4+7+5= **96** |
| **ಮನೋಭಾವ** | **A T T I T U DE** |
| | 1+20+20+9+20+21+4+5 = **100** |
| **ಭಗವತ್ ಪ್ರೀತಿ** | **L O V E O F G O D** |
| ಅಂತೆಯೇ | 12+15+22+5+15+6+7+15+4= **101** |

ಪೂರ್ಣತೆ (100) ಸಾಧಿಸಬೇಕೆಂದರೆ ಸಾಧಿಸಬೇಕೆಂಬ ಛಲ, ಕಷ್ಟ ಪಟ್ಟು ಕೆಲಸ ಮಾಡುವ ಪ್ರವೃತ್ತಿ, ಜ್ಞಾನ ಹಾಗೂ ಮನೋಭಾವ ಅವಶ್ಯಕ. ಅದಕ್ಕಿಂತ ಮೇಲೇರಬೇಕೆಂದರೆ (101) ಭಗವಂತನ ಕೃಪೆ ಅವಶ್ಯಕ. ಇದೇ ಶೇ. 101



# ಅಭಿನಂದನೆಗಳು

**ದಿನಾಂಕ 30-6-14 ರಂದು ಪಿ.ಎಸ್.ಎಲ್.ವಿ.ಪಿ. – 23 ಉಪಗ್ರಹ ವಾಹಕ ಯಶಸ್ವಿಯಾಗಿ ಉಡಾವಣೆಯಾಗಿದೆ. ಇಸ್ರೋದ ಈ ಮೈಲಿಗಲ್ಲಿನ ಸಾಧನೆಗೆ ನಮ್ಮ ವಿಜ್ಞಾನಿಗಳಿಗೆ ಕರ್ನಾಟಕ ರಾಜ್ಯ ಮಾಧ್ಯಮ ಶಿಕ್ಷಕ ಸಂಘ ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ. ಈ ಉಪಗ್ರಹ ನಾಲ್ಕು ರಾಷ್ಟ್ರಗಳ 5 ಉಪಗ್ರಹಗಳನ್ನು ಒಳಗೊಂಡಿರುವುದು ವಿಶೇಷ. ಟಿ.ಎಸ್.ಎಲ್.ವಿ.ಪಿ. – 23 ರಾಕೆಟ್ ಅನ್ನು ನಿರ್ಮಿಸಿದವರು ಕನ್ನಡಿಗರಾದ, ಚಿಕ್ಕಮಗಳೂರಿನ ಮೂಲದ ವಿಜ್ಞಾನಿ ಪ್ರೊ. ಬಿ. ಎನ್. ಸುರೇಶ್. ಕನ್ನಡಿಗರಿಗೆಲ್ಲಾ ಇದು ಅತ್ಯಂತ ಹೆಮ್ಮೆಯ ವಿಷಯ. ಪ್ರೊ. ಸುರೇಶ್ ಅವರಿಗೆ ನಮ್ಮ ವಿಶೇಷ ಅಭಿನಂದನೆಗಳು.**

# ಭಾರತ ಬಿಟ್ಟು ತೊಲಗಿ ಚಳವಳಿ



**ವಿ. ರಾಜ**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**
**ಬೆಂಗಳೂರು ದಕ್ಷಿಣ ಜಿಲ್ಲೆ ಅಧ್ಯಕ್ಷರು**

ಚಲೇಜಾವ್ ಚಳವಳಿ, ಕ್ವಿಟ್ ಇಂಡಿಯಾ, ಎಂದು ಕರೆಯಲಾಗುವ ಭಾರತ ಬಿಟ್ಟು ತೊಲಗಿ ಚಳುವಳಿಯು ಒಂದು ಅಸಹಕಾರ ಚಳುವಳಿಯಾಗಿದ್ದು ಆಗಸ್ಟ್ 1942ರಲ್ಲಿ ಮಹಾತ್ಮಾ ಗಾಂಧಿಯವರ ಮುಂದಾಳತ್ವದಲ್ಲಿ ನಡೆಯಿತು. ಇದರ ಗುರಿ ಬ್ರಿಟಿಷ್ ಸರ್ಕಾರದಿಂದ ಭಾರತದ ಸ್ವಾತಂತ್ರ್ಯ ಪಡೆಯುವುದಾಗಿತ್ತು. 8 ಆಗಸ್ಟ್ ರಂದು ಮುಂಬಯಿಯ ಗೊವಾಳಿಯ ಮೈದಾನ (ಇಂದಿನ ಹೆಸರು – ಆಗಸ್ಟ್ ಕ್ರಾಂತಿ ಮೈದಾನ)ದಲ್ಲಿ ಗಾಂಧೀಜಿಯವರ ಮಾಡು ಇಲ್ಲವೆ ಮಡಿ ಎಂಬ ಘೋಷಣೆಯೊಂದಿಗೆ ಪ್ರಾರಂಭವಾಯಿತು. ಆದರೆ ಈ ಘೋಷಣೆಯ 24 ಗಂಟೆಗಳೊಳಗೆ ಬಹುತೇಕ ರಾಷ್ಟ್ರೀಯ ನಾಯಕರು ಬಂಧಿತರಾಗಿ ಆ ವರ್ಷವನ್ನು ಕಾರಾಗೃಹದಲ್ಲಿ ಕಳೆಯಬೇಕಾಯಿತು.

1942ರ ವೇಳೆಯಲ್ಲಿ ಬ್ರಿಟಿಷರು ಭಾರತದ ನಾಯಕರನ್ನು ಲೆಕ್ಕಿಸದೇ ಭಾರತದ ಸೇನೆಯನ್ನು ಎರಡನೇ ಮಹಾಯುದ್ಧದಲ್ಲಿ ಬಳಸಿಕೊಂಡರು. ಇದರಿಂದ ಕುಪಿತರಾದ ಸುಭಾಷ್ ಚಂದ್ರ ಬೋಸರು ಭಾರತೀಯ ರಾಷ್ಟ್ರೀಯ ಸೇನೆಯನ್ನು ಜಪಾನೀಯರ ಸಹಾಯದಿಂದ ಒಗ್ಗೂಡಿಸಿದರು. ಈ ಸೇನೆಯು ಅಸ್ಸಾಂ, ಬಂಗಾಳ, ಮತ್ತು ಬರ್ಮಾ ಕಾಡುಗಳಲ್ಲಿ ಛಲದಿಂದ ಹೋರಾಡಿದರು. ಬೋಸರ ಧೈರ್ಯ–ಸಾಹಸಗಳಿಂದ ಉತ್ತೇಜಿತರಾದ ಹೊಸ ಪೀಳಿಗೆಯ ಭಾರತೀಯರು ಈ ಚಳುವಳಿಯನ್ನು ಸೇರಿದರು.

ಎರಡನೇ ಮಹಾಯುದ್ಧ ಪ್ರಾರಂಭವಾದಾಗ, ಕಾಂಗ್ರೆಸ್ ಪಕ್ಷದ ಕಾರ್ಯಕಾರಿಣಿ ಸಮಿತಿಯು ಬ್ರಿಟಿಷ್ ಸರ್ಕಾರವನ್ನು ಸಮರ್ಥಿಸುವುದೆಂದೂ, ಇದಕ್ಕೆ ಪ್ರತಿಯಾಗಿ ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕೆಂದೂ ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸಿತು. ಆದರೆ ಸರ್ಕಾರ ಇದಕ್ಕೆ ಬೆಲೆ ಕೊಡಲಿಲ್ಲ.

14 ಜುಲೈ, 1942ರಂದು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಗೊತ್ತುವಳಿ ಹೊರಡಿಸಲಾಯಿತು. ಈ ಬೇಡಿಕೆ ನೆರವೇರದಿದ್ದರೆ, ಅಸಹಕಾರ ಚಳುವಳಿಯನ್ನು ನಡೆಸುವುದಾಗಿಯೂ ಘೋಷಿಸಲಾಯಿತು. ಗಾಂಧೀಜಿಯ ನಾಯಕತ್ವದಲ್ಲಿ ವಿಶ್ವಾಸ ಸೂಚಿಸಿದರು. ಸರ್ದಾರ್ ಪಟೇಲ್ ಮತ್ತು ಡಾ. ರಾಜೇಂದ್ರ ಪ್ರಸಾದ್ ಈ ನಿಲುವಳಿಯನ್ನು ಬಹಿರಂಗವಾಗಿ ಬೆಂಬಲಿಸಿದರು.

8 ಆಗಸ್ಟ್, 1942ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮುಂಬೈ ಅಧಿವೇಶನದಲ್ಲಿ ಭಾರತ ಬಿಟ್ಟು ತೊಲಗಿ ಎಂಬ ಗೊತ್ತುವಳಿಯನ್ನು ಹೊರಡಿಸಲಾಯಿತು. ಗಾಂಧೀಜಿಯವರು ಮುಂಬಯಿಯ ಗೊವಾಲಿಯ ಮೈದಾನದಲ್ಲಿ ಭಾರತೀಯರಿಗೆ ಅಹಿಂಸಾತ್ಮಕ ಅಸಹಕಾರ ಮಾಡುವಂತೆ ಕರೆ ಕೊಟ್ಟರು. ಜನರಿಗೆ ಬ್ರಿಟಿಷ ಸರ್ಕಾರವನ್ನು ಅನುಸರಿಸದೇ ಸ್ವತಂತ್ರರಾಗಿ ಬಾಳುವುದಕ್ಕೆ ಕರೆಕೊಟ್ಟರು. ಗಾಂಧೀಜಿಯವರ ಈ ಕರೆಗೆ ಭಾರತೀಯರು ಬೃಹತ್ ಸಂಖ್ಯೆಯಲ್ಲಿ ಓಗೊಟ್ಟರು. ಬೆಂಬಲ ಸೂಚಿಸಿದವರಲ್ಲಿ ಗಾಂಧೀಜಿಯವರ ಅಹಿಂಸಾತ್ಮಕ ತತ್ವದ ವಿರೋಧಿಗಳಾದ ಕ್ರಾಂತಿಕಾರಿಗಳೂ ಸೇರಿದ್ದರು. ಬೆಂಗಳೂರು ವೈದ್ಯಕೀಯ ಕಾಲೇಜಿನ ಎದುರು ಧರಣಿ ನಡೆಸಲಾಯಿತು.

ಜಪಾನಿ ಸೇನೆಯು ಭಾರತದ ಬರ್ಮಾ ಗಡಿಯ ಬಳಿ ತಲುಪಿದ್ದನ್ನು ಕಂಡ ಬ್ರಿಟಿಷರು ಮರುದಿನವೇ ಗಾಂಧಿಯವರನ್ನು ಬಂಧಿಸಿದರು. ಎಲ್ಲ ರಾಷ್ಟ್ರೀಯ ನಾಯಕರನ್ನೂ ಬಂಧಿಸಲಾಯಿತು. ಇದರಿಂದ ಜನರಲ್ಲಿ ವಿರೋಧಿ ಭಾವನೆ ಇನ್ನೂ ಹೆಚ್ಚಾಯಿತು. ಬೃಹತ್ ಪ್ರಮಾಣದಲ್ಲಿ ವಿರೋಧ ಪ್ರದರ್ಶನ ಮತ್ತು ಧರಣಿಗಳು ನಡೆದವು. ಆದರೆ ಎಲ್ಲ ವಿರೋಧಗಳು ಅಹಿಂಸಾತ್ಮಕವಾಗೇನೂ ಉಳಿಯಲಿಲ್ಲ. ಬಾಂಬುಗಳನ್ನು ಸ್ಫೋಟಿಸಲಾಯಿತು, ಸರ್ಕಾರೀ ಕಟ್ಟಡಗಳನ್ನು ಸುಡಲಾಯಿತು, ವಿದ್ಯುತ್ತನ್ನು ನಿಲ್ಲಿಸಲಾಯಿತು, ಮತ್ತು ಸಾರಿಗೆ ಮತ್ತು ಸಂಪರ್ಕಗಳನ್ನು ಕಡಿಯಲಾಯಿತು.

ಆದರೆ ಬ್ರಿಟಿಷರು ತ್ವರಿತವಾಗಿ ಪ್ರದರ್ಶನಕಾರರನ್ನು ಬಂಧಿಸಿದರು. ಒಂದು ಲಕ್ಷಕ್ಕಿಂತಲೂ ಹೆಚ್ಚು ಜನರನ್ನು ಬಂಧಿಸಲಾಯಿತು, ಬೃಹತ್ ಪ್ರಮಾಣದಲ್ಲಿ ದಂಡಗಳನ್ನು ವಿಧಿಸಲಾಯಿತು, ಬಾಂಬುಗಳನ್ನು ವಿರೋಧಿಗಳ ಮೇಲೆ ಬಳಸಲಾಯಿತು, ಮತ್ತು ಪ್ರದರ್ಶನಾಕಾರರನ್ನು ಸಾರ್ವಜನಿಕವಾಗಿ ದಂಡಿಸಲಾಯಿತು. ಬಹಳಷ್ಟು ರಾಷ್ಟ್ರೀಯ ನಾಯಕರು ಭೂಗತರಾಗಿ ರೇಡಿಯೋ ಸ್ಟೇಷನ್‌ಗಳಿಂದ ಜನರಿಗೆ ಸಂದೇಶ ಕೊಡುತ್ತಿದ್ದರು. ಬ್ರಿಟಿಷರು ಇದರಿಂದ ಎಷ್ಟು ಕಂಗಾಲಾಗಿದ್ದರೆಂದರೆ, ಗಾಂಧೀಜಿ ಮತ್ತು ಇತರ ನಾಯಕರನ್ನು ಬಂಧಿಸಿದರು.

ರಾಷ್ಟ್ರೀಯ ನಾಯಕರು ಇಡೀ ಪ್ರಪಂಚದಿಂದ ಮೂರು ವರ್ಷಗಳ ಕಾಲ ಸಂಪರ್ಕ ಕಳೆದುಕೊಂಡರು. ಮಹಾತ್ಮಾ ಗಾಂಧಿಯವರು 21 ದಿನಗಳ ಉಪವಾಸವನ್ನು ಕೈಗೊಂಡು ಚಳುವಳಿಯನ್ನು ಮುಂದುವರೆಸಲು ಪ್ರಯತ್ನ ತೋರಿದರು. ಅವರ ಆರೋಗ್ಯ ಹದಗೆಟ್ಟ ಕಾರಣ ಬ್ರಿಟಿಷರು ಗಾಂಧಿಯವರನ್ನು 1944ರಲ್ಲಿ ಬಿಡುಗಡೆಗೊಳಿಸಿದರೂ ಕೂಡ, ಅವರು ರಾಷ್ಟ್ರೀಯ ನಾಯಕರ ಬಿಡುಗಡೆಗೆ ಒತ್ತಾಯಿಸಿ

**ಪುಟ 7 ಕ್ಕೆ ➤**

# ಹೆಮ್ಮೆಯ ಭಾರತ

# ಅಭಿವೃದ್ಧಿ ಓಟಕ್ಕೆ ನಾವೇಕೆ ಹೆಜ್ಜೆ ಹಾಕುತ್ತಿಲ್ಲ ?

ದಾಶಮಿಕ ಪದ್ಧತಿಯನ್ನು 1202ರಲ್ಲಿ ಯೂರೋಪಿನವರು ಭಾರತದಿಂದ ಪಡೆದರು. ಅನಂತರ ಸುಮಾರು 900 ವರ್ಷಗಳಲ್ಲಿ ಪಾಶ್ಚಾತ್ಯ ಜಗತ್ತಿನಲ್ಲಿ ಅಪಾರ ಬೆಳವಣಿಗೆಯಾದುದನ್ನು ಗಮನಿಸಿದ್ದೇವೆ. ಆದರೆ ಎರಡು– ಎರಡೂರೆ ಸಾವಿರ ವರ್ಷಗಳ ಇತಿಹಾಸವಿರುವ ನಾವು ಪಾಶ್ಚಾತ್ಯ ಜಗತ್ತಿನ ಓಟಕ್ಕೆ ಸಮನಾಗಿ ಹೆಜ್ಜೆ ಹಾಕಲಾಗುತ್ತಿಲ್ಲ. ಏಕೆ? ಇದಕ್ಕೆ ಕಾರಣ ನಮ್ಮ ಶಿಕ್ಷಣದಲ್ಲಿರುವ ಸಮಸ್ಯೆಗಳೆನ್ನಬಹುದು. ಯಾವುದೇ ಪಠ್ಯದ ಸಾರ್ಥಕತೆ ಇರುವುದು ಹೊಸದನ್ನು ಕಲಿಸುವುದರ ಜೊತೆಗೆ ಹೊಸದನ್ನು ಕಲಿಯಲು ವಿದ್ಯಾರ್ಥಿಯನ್ನು ಪ್ರೇರೇಪಿಸುವುದರಲ್ಲಿ. ಅಂತಹ ಪ್ರೇರಣೆ ನಮ್ಮ ಮಕ್ಕಳಿಗೆ ಬರುತ್ತಿದೆಯೇ?

ವಿಜ್ಞಾನ ಕಲಿತವರಲ್ಲಿ 2% ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಉನ್ನತ ಸಂಶೋಧನೆಯತ್ತ ಆಸಕ್ತಿ ವಹಿಸುತ್ತಿದ್ದಾರೆ. ಅಂದರೆ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಗಂಭೀರವಾದ ಲೋಪಗಳಿವೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಈಗ ವಿದ್ಯಾರ್ಥಿಗಳು ಓದುತ್ತಿರುವ ವಿಜ್ಞಾನ ಕೇವಲ ವ್ಯಾಖ್ಯೆ, ವಿವರಣೆ, ಸೂತ್ರಗಳ ಸಂತೆಯೇ ಹೊರತು ಯಾವೊಂದೂ ಹೊಸ ಆಲೋಚನೆಗಳನ್ನು ಬಿತ್ತುವ ಕೆಲಸ ಮಾಡುತ್ತಿಲ್ಲ. ನಮ್ಮ ಪುಸ್ತಕಗಳು ತಮ್ಮ ದಂತ ಗೋಪುರಗಳಿಂದ ಇಳಿದು ನೆಲದ ಮಟ್ಟಕ್ಕೆ ಬರಬೇಕು. ಅಮೆರಿಕ, ಆಸ್ಟ್ರೇಲಿಯ, ರಷ್ಯದ ವಿಜ್ಞಾನಿಗಳ ಪ್ರಯೋಗಗಳ ಬಗ್ಗೆ ತಿಳಿಸುವುದರೊಂದಿಗೆ ನಮ್ಮ ದೇಶದ ಆಗುಹೋಗುಗಳ ಬಗ್ಗೆ ಚರ್ಚಿಸಬೇಕು. ನಮ್ಮ ದೇಶದಲ್ಲಿ ನಡೆಯುತ್ತಿರುವ ಸಂಶೋಧನೆಗಳು, ಪರಿಸರ ಹೋರಾಟಗಳು, ಪ್ರಾಕೃತಿಕ ಬದಲಾವಣೆಗಳು, ಕೈಗಾರಿಕೆಗಳ ಸಾಧಕ–ಬಾಧಕಗಳ ಬಗ್ಗೆ ಹೆಚ್ಚುಹೆಚ್ಚಾಗಿ ಚರ್ಚಿಸಬೇಕು. ಇದುವರೆಗೆ ನಡೆದಿರುವ ಸಂಶೋಧನೆಗಳ ಬಗ್ಗೆ ತಿಳಿಸುವುದರೊಂದಿಗೆ ಮಕ್ಕಳೇ ಮಾಡಬಹುದಾದ ಪ್ರಯೋಗಗಳ ಕಡೆ ಅವರನ್ನು ಆಕರ್ಷಿಸಬೇಕಾಗಿದೆ. ವಿಜ್ಞಾನ ಎಂದರೆ ಪ್ರಯೋಗಾಲಯದಲ್ಲಿ ನಡೆಯುವ ಮಾಯಾಜಾಲ ಎಂಬ ಭ್ರಮೆ ಕಳಚಿ, ಅದು ನಮ್ಮ ನಡುವೆ ನಡೆಯುವ ಸುತ್ತಮುತ್ತಲ ವಿದ್ಯಮಾನವೆಂಬ ಹೊಸ ದೃಷ್ಟಿಯನ್ನು ವಿದ್ಯಾರ್ಥಿಗಳಿಗೆ ಕೊಡಬೇಕಾಗುತ್ತದೆ. ಇದು ಸಾಧ್ಯವಾಗಬೇಕಾದರೆ ವಿಜ್ಞಾನ ಪಾರಿಭಾಷಿಕ ಪದಗಳ ಛದ್ಮವೇಷ ಕಳಚಿಟ್ಟು ಮಕ್ಕಳಿಗೆ ಸುಲಭವಾಗಿ ಅರ್ಥವಾಗುವ ಆಡುನುಡಿಯಲ್ಲಿ ವಿಚಾರಗಳನ್ನು ತಿಳಿಸುವಂತಾಗಬೇಕು. ಹಾಗಾದಾಗ ಮುಂಬರುವ ವರ್ಷಗಳಲ್ಲಿ ನಾವೂ ಪಾಶ್ಚಮಾತ್ಯರಂತೆ ಅಭಿವೃದ್ಧಿ ಸಾಧನೆಯ ಓಟ ಪಡೆಯುವುದರಲ್ಲಿ ಅನುಮಾನವಿಲ್ಲ.

ಹಾಗಾದರೆ ಭಾರತೀಯರ ಸಾಧನೆ ಇಲ್ಲವೇ ಇಲ್ಲವೆಂದು ನಿರಾಶರಾಗಬೇಕಾಗಿಲ್ಲ. ವೇದ, ಉಪನಿಷತ್ತುಗಳ ಕಾಲದಿಂದ ಇಲ್ಲಿಯವರೆಗೆ ಎಲ್ಲ ಕ್ಷೇತ್ರಗಳಲ್ಲೂ ನಮ್ಮ ದೇಶದ ಸಾಧನೆ ಗಮನಾರ್ಹ ಹಾಗೂ ಅಭಿಮಾನ ಮೂಡಿಸುವಂತಹುದೇ. ನಮ್ಮ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಪ್ರೇರಣೆ ಮೂಡಿಸುವ ಸಲುವಾಗಿ 'ಹೆಮ್ಮೆಯ ಭಾರತ'ದ ಅಡಿಯಲ್ಲಿ ಭಾರತೀಯರ ಸಾಧನೆಗಳನ್ನು ಇಲ್ಲಿ ಪರಿಚಯಿಸುತ್ತಿದ್ದೇವೆ.

(ಆಧಾರ)– ಹೊಸದಿಗಂತ ಜೂನ್ 4ರ ಸಂಚಿಕೆ.

➢ ಪುಟ 6 ರಿಂದ..... **ಭಾರತ ಬಿಟ್ಟು ತೊಲಗಿ**

ಧರಣಿಯನ್ನು ಮುಂದುವರೆಸಿದರು. 1944ರ ಪ್ರಾರಂಭದಲ್ಲಿ ಭಾರತ ಬಹುತೇಕವಾಗಿ ಶಾಂತವಾಗಿತ್ತು.

ರಾಷ್ಟ್ರೀಯ ಮಟ್ಟದಲ್ಲಿ ಚಳುವಳಿಗೆ ಯಶಸ್ಸು ಸಿಗದಿದ್ದರೂ ಸತಾರಾ, ತಲಚೇರ್, ಮತ್ತು ಮಿಡ್ನಾಪುರಗಳಲ್ಲಿ ಬಹು ಯಶಸ್ವಿಯಾಯಿತು. ಮಿಡ್ನಾಪುರದಲ್ಲಿ ಜನರು ಪರ್ಯಾಯ ಸರ್ಕಾರವನ್ನೂ ಸ್ಥಾಪಿಸಿದರು. ನಂತರ ಗಾಂಧೀಜಿಯ ಕರೆಗೆ ಓಗೊಟ್ಟು ಇದನ್ನು ಬಿಟ್ಟುಕೊಟ್ಟರು.

ಭಾರತದ ಸ್ವಾತಂತ್ರ್ಯದ ನಿಜವಾದ ಕಾರಣ ಭಾರತೀಯರ ವಿರೋಧವೇ ಅಥವಾ ಸೈನಿಕರ ಬಂಡಾಯವೇ ಎಂಬುದು ವಿವಾದಾತ್ಮಕವಾಗಿದ್ದರೂ ನಿಸ್ಸಂಶಯವಾಗಿ ಹೇಳಬಹುದಾದ ಸಂಗತಿಯೆಂದರೆ ಲಕ್ಷಾಂತರ ಜನರು ಪ್ರೇರಿತರಾಗಿ ಸ್ವಾತಂತ್ರಕ್ಕಾಗಿ ಹೋರಾಡಿದರೆಂಬುದು. ಬ್ರಿಟಿಷರ ಪ್ರತಿಯೊಂದು ನಡೆಯೂ ಇದನ್ನು ಮತ್ತಷ್ಟು ಪ್ರೇರೇಪಿಸಿತು. ಭಾರತೀಯ ರಾಷ್ಟ್ರೀಯ ಸೇನೆ ಮತ್ತು ಮುಂಬಯಿ ದಂಗೆ ಬ್ರಿಟಿಷ್ ಆಡಳಿತದ ಬುಡವನ್ನು ಅಲುಗಾಡಿಸಿದವು. 1946ರ ವೇಳೆಗೆ ಎಲ್ಲ ಬಂಧಿತ ರಾಜಕೀಯ ಅಪರಾಧಿಗಳನ್ನು ಬಿಡುಗಡೆ ಮಾಡಲಾಯಿತು.

ಒಂದು ಹೊಸ ಯುವ ಪೀಳಿಗೆಯು ಗಾಂಧೀಜಿಯವರ ಕರೆಗೆ ಓಗೊಟ್ಟಿತ್ತು. ಈ ಚಳುವಳಿಯಲ್ಲಿ ಹೋರಾಡಿದ ಭಾರತೀಯರು ಸ್ವತಂತ್ರ ಭಾರತದ ಪ್ರಥಮ ಪೀಳಿಗೆಯವರಾಗಿ ವಸಾಹತುಶಾಹಿ ಕಾಲದ ನಂತರ ಪ್ರಪಂಚದ ಅತಿ ಗಟ್ಟಿಯಾದ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದರು. ಇದನ್ನು ಮಾನವಕುಲದ ದೂರದರ್ಶಿತ್ವದ ಮಹತ್ತರ ಉದಾಹರಣೆಯೆಂದು ಹೇಳಬಹುದು. ■

# ಕಮಲಾದೇವಿ ಚಟ್ಟೋಪಾಧ್ಯಾಯ

ವರಲಕ್ಷ್ಮಿ
ಕಛೇರಿ ಕಾರ್ಯದರ್ಶಿ
ಕರ್ನಾಟಕ ರಾಜ್ಯ
ಮಾಧ್ಯಮಿಕ ಶಿಕ್ಷಕ ಸಂಘ





ಭಾರತ ಸ್ವಾತಂತ್ರ್ಯ ಚಳುವಳಿ, ಸ್ವಾತಂತ್ರ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರ ಅಪಾರ. ಝಾನ್ಸಿರಾಣಿ ಲಕ್ಷ್ಮಿಬಾಯಿ, ಕಿತ್ತೂರು ಚೆನ್ನಮ್ಮ ಇವರೆಲ್ಲ ಶಸ್ತ್ರ ಹಿಡಿದು ಬ್ರಿಟಿಷ್‌ರನ್ನು ಭಾರತದಿಂದ ಒದ್ದೋಡಿಸಲು ಪ್ರಯತ್ನಿಸಿದವರು. ಹಾಗೆಯೇ ಶಸ್ತ್ರ ಹಿಡಿಯದೆ ಅಹಿಂಸಾ ಮಾರ್ಗದಿಂದ ನಮ್ಮ ದೇಶದ ಸ್ವಾತಂತ್ರ್ಯ ತಂದುಕೊಡಲು ಪ್ರಯತ್ನಿಸಿದ ಮಹಿಳೆಯರೂ ಇದ್ದಾರೆ. ಉದಾ ಸರೋಜಿನಿ ನಾಯ್ಡು, ಅನಿಬೆಸೆಂಟ್, ಮೇಡಂ ಕಾಮ ಇತ್ಯಾದಿ. ಹೀಗೆ ಇದೇ ಸಾಲಿನಲ್ಲಿ ಬರುವ ಮತ್ತೊಬ್ಬ ಮಹಿಳೆ ಕಮಲಾದೇವಿ ಚಟ್ಟೋಪಾಧ್ಯಾಯ. ಮಹಿಳೆ ಮನೆಯ ಕೆಲಸಕ್ಕೆ ಮಾತ್ರ ಸೀಮಿತ ಎಂದು ತಿಳಿದಿದ್ದ ಕಾಲ ಅದು. ಮೂಡನಂಬಿಕೆಯಿಂದ ಮಹಿಳೆಯನ್ನು ಕತ್ತಲೆಯ ಕೂಪದಲ್ಲಿ ದೂಡುತ್ತಿದ್ದ ಕಾಲವದು. ಹೀಗಿದ್ದರೂ ಇಂತಹ ಮಹಿಳೆಯರನ್ನು ಮೂಢನಂಬಿಕೆಯ ಬಲೆಯಿಂದ ಹೊರತಂದು ಸಂಘಟಿಸಿ, ಹುರಿದುಂಬಿಸಿ, ಮಹಿಳಾ ಆಂದೋಲನದ ಮುಂದಾಳುವಾಗಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಹೆಚ್ಚು ಹೆಚ್ಚಾಗಿ ಭಾಗವಹಿಸುವಂತೆ ಪ್ರಚೋದನೆ ಮಾಡಿದವರು ಕಮಲಾದೇವಿ.

ಕಮಲಾದೇವಿಯವರು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ 1903 ಏಪ್ರಿಲ್ 3 ರಂದು ಜನಿಸಿದರು. ಕಮಲಾದೇವಿಯವರ ತಂದೆ ಧಾರೇಶ್ವರ ಅನಂತಯ್ಯನವರು, ಅವರು ಮದ್ರಾಸಿನ ನಾಗರಿಕ ಸೇವೆಯಲ್ಲಿ ಹಿರಿಯ ಉನ್ನತ ಅಧಿಕಾರಿಯಾಗಿದ್ದರು. ತಾಯಿಯ ಹೆಸರು ಗಿರಿಜಾಬಾಯಿ. ಕಮಲಾದೇವಿ ಅವರ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವು ಮಂಗಳೂರಿನಲ್ಲಿಯೇ ನಡೆಯಿತು. ತಂದೆ ಉನ್ನತ ಹುದ್ದೆಯಲ್ಲಿದ್ದುದರಿಂದ ಮಗಳ ಉನ್ನತ ಶಿಕ್ಷಣವನ್ನು ಲಂಡನ್ನಿನ ಬೆಡ್ ಫೋರ್ಡ್ ಕಾಲೇಜು ಹಾಗೂ ಸ್ಕೂಲ್ ಆಫ್ ಎಕನಾಮಿಕ್ಸ್ ನಲ್ಲಿ ಮಾಡಿಸಿದರು.

ಕಮಲಾದೇವಿಯವರಿಗೆ ಕಲೆ, ರಂಗಭೂಮಿಯ ಬಗ್ಗೆ ಬಹಳ ಆಸಕ್ತಿಯುಳ್ಳವರಾಗಿದ್ದರು. ಮುಂದೆ ಈ ಕ್ಷೇತ್ರದಲ್ಲಿಯೂ ಪರಿಣತಿಗೈದು ಹೆಸರು ಮಾಡಿದರಲ್ಲದೆ ಅನೇಕ ಬಹುಮಾನ, ಪ್ರಶಸ್ತಿಗಳನ್ನು ಪಡೆದುಕೊಂಡಿದ್ದರು.

ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಚಳುವಳಿಯತ್ತ ಆಕರ್ಷಿತರಾದ ಕಮಲಾದೇವಿ ಚಳುವಳಿಗೆ ಧುಮುಕಿದರು. ದೇಶಾದ್ಯಂತ ಸ್ವಾತಂತ್ರ್ಯ ಹೋರಾಟ ನಡೆದಿತ್ತು. ಇದು ಕಮಲಾದೇವಿಯವರ ಮನಸ್ಸನ್ನು ಸೆಳೆದಿತ್ತು. ಆಗಲೇ ಅವರು ಕಾಲೇಜು ವಿದ್ಯಾಭ್ಯಾಸ ತೊರೆದು ಅಸಹಕಾರ ಚಳುವಳಿಯಲ್ಲಿ ಧುಮುಕಿದರು. ಯುವಕ-ಯುವತಿಯರಲ್ಲಿ ರಾಷ್ಟ್ರಸೇವೆಯ ಜಾಗೃತಿ, ದೇಶಾಭಿಮಾನದ ಬೀಜ ಅಂಕುರವಾಗುವಂತೆ ಮಾಡುವಲ್ಲಿ ಅವರು ಯಶಸ್ವಿಯಾದರು. ಬಡವರ, ರೈತರ ಕಷ್ಟಗಳನ್ನು ಅರಿತಿದ್ದರು. ಅವರು 'ಕೃಷಿಯು ರೈತರ ಬೆನ್ನೆಲುಬು' ರೈತರು ಮೊದಲು ಋಣಮುಕ್ತರಾಗಬೇಕು, ಕೃಷಿ ಸಮಸ್ಯೆಗಳ ಪರಿಹಾರದಿಂದಲೇ ಜನತೆಯ ಉದ್ಧಾರ ಸಾಧ್ಯವಿದೆ ಎಂಬುದು ಅವರ ನಿಲುವಾಗಿತ್ತು.

ಕಮಲಾದೇವಿಯವರು ಬಾಲ್ಯದಲ್ಲಿದ್ದಾಗಲೇ ಮನೆಯವರೆಲ್ಲರ ಒತ್ತಾಯದ ಮೇರೆಗೆ ವಿವಾಹವಾಗಿದ್ದರು. ಅವರ ಪತಿ ಕೆಲವೇ ವರ್ಷಗಳಲ್ಲಿ ಅನಾರೋಗ್ಯದಿಂದ ನಿಧನರಾದರು. ಕಮಲಾದೇವಿ ಎದೆಗುಂದದೆ, ಹಳೆಯ ಕಂದಾಚಾರಗಳಿಗೆ ಬಲಿಯಾಗದೆ ಹಿರಿಯರ ವಿರೋಧದ ನಡುವೆಯೂ ಆಗಿನ ಹಿರಿಯ ಸ್ವಾತಂತ್ರ್ಯಹೋರಾಟಗಾರ ಹರೀಂದ್ರನಾಥ ಚಟ್ಟೋಪಾಧ್ಯಾಯರನ್ನು ಮದುವೆಯಾದರು. ಸ್ವಾತಂತ್ರ್ಯ ಚಳುವಳಿಯ ಮಧ್ಯೆಯೇ ತುಸು ವಿಶ್ರಾಂತಿ ಮಾಡಿಕೊಂಡು ಕಮಲಾದೇವಿ ಅವರು ತಮ್ಮ ಪತಿಯೊಡನೆ ಯುರೋಪ್ ದೇಶಗಳ ವಿಸ್ತೃತ ಪ್ರವಾಸ ಮಾಡಿದರಲ್ಲದೆ ಆ ದೇಶಗಳ ಸ್ವಾತಂತ್ರ್ಯ ಹೋರಾಟಗಾರರ ಕುರಿತು, ಅಲ್ಲಿಯ ಕಲಾಕೇಂದ್ರಗಳಿಗೆ ಭೇಟಿಕೊಟ್ಟು, ರಂಗಭೂಮಿಯ ಬಗ್ಗೆಯೂ, ಆಳವಾದ ಅಧ್ಯಯನ ನಡೆಸಿ ಸ್ವದೇಶಕ್ಕೆ ವಾಪಾಸಾದರು.

ಕಾರ್ಮಿಕರ ಹಿತರಕ್ಷಣೆಗಾಗಿ ಕಾರ್ಮಿಕ ಸಂಸ್ಥೆಗಳಲ್ಲಿ ಸಂಘಟನೆಗೂ ಅದರ ಚಳುವಳಿಗೂ ಸ್ವತಃ ತಾವೇ ಬೆಂಗಾವಲಾಗಿ ನಿಂತು, ಕಾರ್ಮಿಕರ ನಾಯಕತ್ವ ವಹಿಸಿದರಲ್ಲದೆ ಈ ಚಳುವಳಿ ಯಶಸ್ವಿಯಾಗುವಂತೆಯೂ ಮಾಡಿದರು. 'ಖಾದಿಯೇ ಜೀವನದ ಹಾದಿ' ಎಂಬ ತತ್ವದಂತೆ ಖಾದಿಯ ಹಿಂದಿರುವ ಉದ್ದೇಶಗಳು ಜನ ಸಾಮಾನ್ಯರಿಗೆ ತಿಳಿಯುವಂತೆ ಮಾಡಿದರು. ಖಾದಿ ಬಟ್ಟೆಗೆ ಕಲಾತ್ಮಕತೆ ಅಳವಡಿಸಿ ಹೊಸ ಹೊಸ ರೀತಿಯಲ್ಲಿ ವೈವಿಧ್ಯಮಯ ಬಣ್ಣ ಹಾಕುವ ಭಾರತೀಯ ಸಾಂಪ್ರದಾಯಿಕ ಕಲೆಗೆ ಸ್ಫೂರ್ತಿ ನೀಡಿದರು.

ಪುಟ 9 ಕ್ಕೆ ➢

**ನಾವೆ ಎಲ್ಲಕ್ಕೂ ಹೊಣೆಗಾರರಾದಾಗ ಮಾತ್ರ ನಮಗೆ ಅತಿ ಶ್ರೇಷ್ಠವಾದ ಕೆಸಲವನ್ನು ಮಾಡಲು ಸಾಧ್ಯವಾಗುತ್ತದೆ.**

➢ ಪುಟ 8 ರಿಂದ..... ಕಮಲಾದೇವಿ

ತಾವು ಯಾವುದೇ ಕೆಲಸ ಮಾಡಿದರೂ ಅಚ್ಚುಕಟ್ಟಾಗಿ ಮಾಡುವುದು ಅವರ ಹುಟ್ಟುಗುಣ. ಇದರಿಂದಾಗಿ ಹಿಡಿದ ಕೆಲಸವನ್ನು ಬಿಡದೆ ಏನೇ ಕಷ್ಟ ಕಾರ್ಪಣ್ಯಗಳಿದ್ದರೂ ಧೈರ್ಯವಾಗಿ ಮುನ್ನುಗ್ಗಿ ಸಮರ್ಥವಾಗಿ ನಿರ್ವಹಿಸುತ್ತಿದ್ದರು. ಹಾಗಾಗಿ ಯಶಸ್ಸು ತಾನಾಗಿಯೇ ಇವರ ಕೈಸೇರುತ್ತಿತ್ತು. ಅವರು ಅಖಿಲ ಭಾರತ ಮಹಿಳಾ ಸಮ್ಮೇಳನದ ಸಂಘಟನಾ ಕಾರ್ಯದರ್ಶಿ, ಉಪಾಧ್ಯಕ್ಷ ಹಾಗೂ ಅಧ್ಯಕ್ಷರಾಗಿದ್ದರು. ಭಾರತೀಯ ಸಹಕಾರ ಒಕ್ಕೂಟ ಸಂಸ್ಥೆಯ ಅಧ್ಯಕ್ಷರಾಗಿಯೂ, ಕಲಾರಂಗದಲ್ಲಿ ಆ ಸಂಸ್ಥೆಯ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಅದಲ್ಲದೇ ಅಂತರಾಷ್ಟ್ರೀಯ ರಂಗಭೂಮಿ ಸಂಸ್ಥೆ ಮತ್ತು ಭಾರತೀಯ ರಂಗಭೂಮಿ ಕೇಂದ್ರದ ಸ್ಥಾಪಕರೂ ಇವರೇ ಆಗಿದ್ದರು.

ಕಮಲಾದೇವಿಯವರು ಭಾರತೀಯ ಮಹಿಳೆಯರ ಕರಕುಶಲ ಕೈಗಾರಿಕೆಗಳು, ಭಾರತೀಯ ಕಂಬಳಿಗಳು ಹಾಗೂ ರತ್ನಗಂಬಳಿ ಮತ್ತು ನೆಲಾವರಣಗಳು, ಭಾರತೀಯ ಮಹಿಳಾ ಜಾಗೃತಿ, ರಾಷ್ಟ್ರೀಯ ರಂಗಭೂಮಿ, ಭಾರತೀಯ ಮಹಿಳೆಯರ ಸ್ವಾತಂತ್ರ್ಯ ಹೋರಾಟ ಮುಂತಾದ ವಿಷಯಗಳ ಕುರಿತು ಉದ್ಗ್ರಂಥಗಳನ್ನು ರಚಿಸಿದ್ದಾರೆ. ಅವರು ದೇಶದ ಅಭಿವೃದ್ಧಿಗೆ ನಡೆಸಿದ ಪ್ರಯತ್ನ, ರಂಗಭೂಮಿ ಮಹಿಳೆಯರು, ಸ್ವಾತಂತ್ರ್ಯ ಹೋರಾಟ ಇನ್ನೂ ಅನೇಕ ಕ್ಷೇತ್ರಗಳಲ್ಲಿಯ ಅವರ ಸಾಧನೆಯನ್ನು ಮನ್ನಿಸಿ ಭಾರತ ಸರ್ಕಾರವು 1955ರಲ್ಲಿ ಪದ್ಮಭೂಷಣ ಪ್ರಶಸ್ತಿ, ಸಾಮಾಜಿಕ ಕ್ಷೇತ್ರದಲ್ಲಿ ಅವರ ಸಾಧನೆಗೆ 1962 ರಲ್ಲಿ ಅವರಿಗೆ ಸಾಮಾಜಿಕ ಧುರೀಣತ್ವಕ್ಕಾಗಿ ಏಶಿಯಾ ಖಂಡದ 'ನೋಬೆಲ್ ಬಹುಮಾನ ಎಂದೇ ಪರಿಗಣಿಸಲ್ಪಡುವ 'ಮ್ಯಾಗ್ಸೆಸ್ಸೆ' ಪ್ರಶಸ್ತಿಗೂ ಪಾತ್ರರಾದರು.

ಕಮಲಾದೇವಿ ಚಟ್ಟೋಪಾಧ್ಯಾಯರವರು ಸುಖೀ ಸಮಾಜವನ್ನು ನಿರ್ಮಾಣ ಮಾಡಬೇಕೆಂಬ ಕನಸುಕಂಡವರು. ಸಮಾಜಕ್ಕೆ ಒಳಿತನ್ನೆ ಬಯಸುವ ಅವರು ಅಕ್ಟೋಬರ್ 29, 1988 ರಲ್ಲಿ ಮರಣ ಹೊಂದಿದರು. 85 ವರ್ಷಗಳ ಕಾಲಾವಧಿಯಲ್ಲಿ ಇವರು ಮಾಡಿದ ಸಾಧನೆ ಮರೆಯಲಾಗದು. ಇವರು ಕನ್ನಡಿಗರು ಎಂಬುದೇ ನಮ್ಮೆಲ್ಲರ ಹೆಮ್ಮೆಯ ವಿಷಯ.

ಭಾರತದ ಶ್ರೇಷ್ಠ ನಾಟಕ ಕೃತಿಗೆ ಭಾರತೀಯ ನಾಟ್ಯ ಸಂಘವು ಪ್ರತಿ ವರ್ಷ 5 ಸಾವಿರ ರೂ ಮೊತ್ತದ 'ಕಮಲಾದೇವಿ ಪಾರಿತೋಷಕ'ವನ್ನು ರಾಷ್ಟ್ರಮಟ್ಟದಲ್ಲಿ ನೀಡುತ್ತಿದೆ. ಕರ್ನಾಟಕ ಕರ ಕುಶಲ ಸಂಸ್ಥೆಯು ಅವರ ಸ್ಮರಣಾರ್ಥ 'ಕಮಲಾದೇವಿ ಚಟ್ಟೋಪಾಧ್ಯಾಯ ವಿಶ್ವಕರ್ಮ ಪ್ರಶಸ್ತಿ' ಯನ್ನು ರಾಜ್ಯಮಟ್ಟದಲ್ಲಿ ನೀಡುವ ಮೂಲಕ ರಾಜ್ಯದ ಕಲಾವಿದರ ಪ್ರತಿಭೆಯನ್ನು ಪುರಸ್ಕರಿಸುತ್ತ, ಕಮಲಾದೇವಿಯವರ ಹೆಸರನ್ನು ಅಜರಾಮರ ಗೊಳಿಸಿದೆ. ●

# ಒಂದು ಸಂಸ್ಕೃತ ದಿನಾಚರಣೆ

✍ ಡಾ|| ಕೆ.ಎಸ್. ರಮಾ

ಸಂಸ್ಕೃತ ಭಾಷೆಯು ವಿಶ್ವಮಾನ್ಯವಾದ ಭಾಷೆ. ಸಂಸ್ಕೃತದ ಜ್ಞಾನ, ಭಾರತೀಯ ಸಂಸ್ಕೃತಿ, ಸಾಹಿತ್ಯದ ತಿಳುವಳಿಕೆಗೆ ಅಡಿಗಲ್ಲು. ಭಾರತೀಯರೆಲ್ಲರೂ ಹೆಮ್ಮೆಯಿಂದ, ಪ್ರೀತಿಯಿಂದ ರಾಷ್ಟ್ರದ ಏಕತೆಗೆ ಅನುಕೂಲವಾದ ಭಾಷೆಯೊಂದನ್ನು ಆರಿಸಿಕೊಳ್ಳಬೇಕಾದಾಗ ಭಾರತೀಯ ಸಂಸ್ಕೃತಿ, ಪರಂಪರೆಗಳ ಪೂರ್ಣವಾಹಿನಿಯಾಗಿ ಸಂಸ್ಕೃತ ಭಾಷೆಯನ್ನು ಆರಿಸಿಕೊಳ್ಳ ಬಹುದು. ಸಂಸ್ಕೃತ ದೇವಭಾಷೆ " ಭಾಷಾಸು ಮುಖ್ಯ, ಮಧುರ, ದಿವ್ಯ ಗೀರ್ವಾಣ ಭಾರತಿ" ದೇವ ಭಾಷೆ ಎಂದರೆ ಅತಿ ಪುರಾತನವಾದ ಭಾಷೆ. ಅಂತಯೇ ಪರಿಪೂರ್ಣವಾದ ಭಾಷೆ. ಅದು ಭಾರತೀಯ ಜೀವನ ಮೌಲ್ಯಗಳ ಆಧಾರ. ಅಷ್ಟೇ ಅಲ್ಲ ಅದು ಇಡೀ ಜಗತ್ತನ್ನೇ ಸುಸಂಸ್ಕೃತವಾಗಿ ಮಾಡಲು ಹೊರಟ ಭಾಷೆ.

"ಕೃಣ್ವಂತು ವಿಶ್ವಂ ಆರ್ಯಾಹ ನಿಸರ್ಗ" ಎಂದು ಪಣ ತೊಟ್ಟವರು ಭಾರತೀಯ ಸನಾತನ ಸಂಸ್ಕೃತದ ಅಧ್ವರ್ಯುಗಳು. ಇಂತಹಾ ಲೋಕೋತ್ತರವಾದ ಭಾಷೆ ಭಾರತದ ಪ್ರಜಾತಂತ್ರದ್ದೂ ಆಗಬಹುದು. ಶ್ರಾವಣ ಪೂರ್ಣಿಮೆಯಂದು ಪ್ರತಿ ವರ್ಷ ಸಂಸ್ಕೃತ ದಿನವೆಂದು ಆಚರಿಸಲಾಗುತ್ತದೆ. 1969ರಿಂದ ಇದು ಪ್ರಾರಂಭವಾಯಿತು. ಅಂದು ಸಂಸ್ಕೃತದ ಪುನರುಜ್ಜೀವನಕ್ಕಾಗಿ ಕಾರ್ಯಕ್ರಮಗಳನ್ನು ನಡೆಸುತ್ತದೆ. ಸಂಸ್ಕೃತದ ಬಗ್ಗೆ ಇರುವ ತಪ್ಪು ತಿಳುವಳಿಕೆಗಳು (ಕಲಿಯಲು ಕಷ್ಟ, ಶ್ರಮ ಅಗತ್ಯ, ಇತ್ಯಾದಿ) ಹೋಗುವಂತೆ ಜನರಲ್ಲಿ ಭಾವನಾತ್ಮಕ, ಕ್ರಿಯಾತ್ಮಕ ಸಂವಹನವನ್ನು ಮಾಡಬೇಕಾಗಿದೆ ಎಂದು ಬಲ್ಲವರ ಅನಿಸಿಕೆ. ಇದು ನಿಜವೂ ಹೌದು. ಸಂಸ್ಕೃತವಿಲ್ಲದೆ ಸಂಸ್ಕೃತಿ ಇಲ್ಲ. ಸಮಾನ ಭಾವನೆ ಇಲ್ಲ. ಸಮಾನ ಜೀವನವೂ ಇಲ್ಲ "ವಸುದೈವ ಕುಟುಂಬಕಂ" ಎಂದು ನಮಗೆ ತಿಳಿಸಿದ (ಸಮಾನತೆಯ ಮಂತ್ರ) ಈ ಭಾಷೆಗಾಗಿ ಒಂದು ದಿನದ ಆಚರಣೆಯಲ್ಲ, ಸದಾ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರುವಂತೆ ಮಾಡುವುದು ಅಗತ್ಯ. ಎಲ್ಲರೂ ಸಂಸ್ಕೃತವನ್ನು ಕಲಿಯೋಣ, ಆದರಿಸೋಣ. ಋಗ್ವೇದದ ಈ ಮಂತ್ರದಿಂದ ಉಪಸಂಹಾರ

**'ಸಮಾನೋ ಮಂತ್ರಃ ಸಮಿತಿಃ ಸಮಾನೀ ಸಮಾನಂ**
**ಮನಃ ಸಹ ಚಿತ್ತವೇಷಾಂ ।**
**ಸಮಾನಂ ಮಂತ್ರಮಭಿ ಮಂತ್ರಯೇವಃ**
**ಸಮಾನೇನ ಹವಿಷಾ ಜು ಹೋಮ ॥**

■

# ವಿದ್ಯಾರ್ಥಿ ಮಿತ್ರ – ೯

**1. ರಸಪ್ರಶ್ನೆ**


ಕರ್ನಾಟಕದ ಮುಖ್ಯ ಬಂದರು – ನ್ಯೂ ಮಂಗಳೂರು ಪೋರ್ಟ್. ಹಾಗೆಯೇ ಈ ಕೆಳಗಿನ ರಾಜ್ಯಗಳ ಮುಖ್ಯ ಬಂದರುಗಳು ಯಾವುವು ಎಂದು ಹೇಳಬಲ್ಲಿರಾ ?

ಅ) ಪಶ್ಚಿಮ ಬಂಗಾಳ    ಆ) ಒಡಿಶಾ (ಒರಿಸ್ಸಾ)    ಇ) ಆಂಧ್ರ ಪ್ರದೇಶ

ಈ) ತಮಿಳುನಾಡು    ಉ) ಕೇರಳ

**2. ಈ ದೇವಾಲಯಗಳನ್ನು ಗುರುತಿಸಬಲ್ಲಿರಾ ?**










**3. ಈ ಗಾದೆಗಳ ಉಳಿದರ್ಧ ಗಾದೆಗಳನ್ನು ಹೇಳಬಲ್ಲಿರಾ ?**

1. ಕೊಟ್ಟದ್ದು ತನಗೆ,––––––
2. ಗುಣ ತಿಳಿದು,––––––
3. ಅಲ್ಪರ ಸಂಗ ,––––––
4. ಸಮಯಕ್ಕಾಗದ ಅರ್ಥ,–––––––––
5. ಚರ್ಮ ತೊಳೆದರೆ,–––––––––

**4. 4. ಈ ಅಕ್ಷರಗಳನ್ನು ಸರಿಯಾಗಿ ಜೋಡಿಸಿ ಅರ್ಥಪೂರ್ಣ ಪದಗಳನ್ನು ರಚಿಸಿರಿ.**

ಉದಾ:–ಣಶಿಕ್ಷ   ಉತ್ತರ : ಶಿಕ್ಷಣ

| | | | | | |
|---|---|---|---|---|---|
| 1. | ಫಣ್ಣುಲದವಮತ್ತಾ | 2. | ಸರಲರ್ಮನಿರಿಪ | 3. | ರಸವಸುಂರೋರದ |
| 4. | ವಗಾಲುಲ್ಲುಹು | 5. | ದಣ್ಯರಅಟ್ಟ | 6. | ಕೈಕೆರಿಗುಗಾಡಿ |
| 7. | ಗಾಕೆನುಹೈರಿ | 8. | ಗೋಪಸಂಪನೆಶು | 9. | ಸಾಣೆಕನುಜೇ |
| 10. | ನುರಿಮೀಕೆಗಾ | | | | |

## ವಿದ್ಯಾರ್ಥಿ ಮಿತ್ರ – ೮ ರ ಉತ್ತರ

**1. ರಸಪ್ರಶ್ನೆ** : ಅ) ಮನುಚರಿತಮು ; ಆ) ಪಾರಿಜಾತಾಪಹರಣಂ ; ಇ) ಕಾಳಹಸ್ತಿ ಮಹಾತ್ಮ್ಯಮ್ ; ಈ)ರಾಜಶೇಖರ ಚರಿತಮು ; ಉ) ಕಲಾಪೂರ್ಣೋದಯಂ ; ಊ) ಕೃಷ್ಣರಾಜ ವಿಜಯಂ ; ಋ) ವಸುಚರಿತಂ

**2. ಮರಗಳು :** 1) ಘೇಂಡಾಮೃಗ ; 2) ಕಾಂಗರೂ ; 3) ಜಿರಾಫೆ (ಗಿಡ) ; 4) ಜೀಬ್ರಾ

**3. ಈ ಒಗಟುಗಳು ?** 1. ಭೂಮಿಗೆ ಬೆಳೆ ; 2. ದಾರಿದ್ರ್ಯವಿಲ್ಲ ; 3. ವಿಚಿತ್ರ ಬೆಳೆ ; 4. ಖಂಡುಗ ಬೆಳೆ ; 5. ಒಂದು ಸಂತೆ ತಿರುಗು.

**4. ಅಕ್ಷರ ಜೋಡಿಸಿ :** ಪಶುಪಾಲನೆ, ಇತರೆ ಮಾಹಿತಿ, ಸಾರಿಗೆ ಸಂಪರ್ಕ, ತಂತ್ರಜ್ಞಾನ, ಅಂಕಿಅಂಶ, ಪಶ್ಚಿಮಘಟ್ಟ, ಪರ್ವತಶ್ರೇಣಿ, ಪ್ರಾಚೀನ ಕಾಲ, ನಾಗರಿಕತೆ, ವೈದಿಕಯುಗ

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

ಮಹತ್ಕಾರ್ಯ ಸಾಧನೆಗೆ ದೀರ್ಘ ಮತ್ತು ಸತತ ಪ್ರಯತ್ನ ಅವಶ್ಯಕ.

## ಸಾಮಾಜಿಕ ಮೌಲ್ಯಗಳು - 2

# ನಾಗರೀಕ ಪ್ರಜ್ಞೆ

ನಮ್ಮ ಸಮಾಜದಲ್ಲಿ ಅಪಾರ ಕೊರತೆ ಇರುವ ಸಾಮಾಜಿಕ ಮೌಲ್ಯಗಳಲ್ಲಿ ಬಹಳ ಮುಖ್ಯವಾದುದು ನಾಗರೀಕ ಪ್ರಜ್ಞೆ. ನಾವು ಆರಾಮವಾಗಿ ಕುಳಿತು ಬಹಳಷ್ಟು ಚರ್ಚಿಸುವ ವಿಷಯವೂ ಇದೇ. ನಾನು ನನ್ನ ಪರಿವಾರ ಎಂಬ ವೈಯುಕ್ತಿಕ ಸ್ವಾರ್ಥದಲ್ಲಿ ಮುಳುಗಿರುವ ನಮಗೆ ನಾಗರೀಕ ಪ್ರಜ್ಞೆ ಎಂಬುವುದು ಆದ್ಯತೆಯ ವಿಷಯವೇ ಅಲ್ಲ .. ಇದು ಕೇವಲ ಅನಕ್ಷರಸ್ತ ರಷ್ಟೇ ಅಲ್ಲ , ಎಲ್ಲವೂ ತಿಳಿದಿದೆ ಎಂಬ ಅಹಂಕಾರವಿರುವ ವಿದ್ಯಾವಂತರಿಗೂ ಅನ್ವಯಿಸುತ್ತದೆ.

ನಮ್ಮಲ್ಲಿನ ಈ ಪ್ರವೃತ್ತಿಯಿಂದಾಗಿ ಪ್ರಪಂಚದ ಮುಂದುವರೆದ ದೇಶಗಳೆದುರು ನಮ್ಮ ದೇಶವು ತಲೆತಗ್ಗಿಸುವಂತೆ ಆಗಿದೆ. ಇದೇ ಕಾರಣಕ್ಕೆ ಪ್ರವಾಸಿಗಳು ನಮ್ಮ ದೇಶಕ್ಕೆ ಬರಲು ಹಿಂದೇಟು ಹಾಕುತ್ತಾರೆ. ನಮ್ಮ ದೇಶದ ಗೌರವವನ್ನು ಎತ್ತಿ ಹಿಡಿಯಲಾದರೂ, ಮನೆಗಳಲ್ಲಿ ತಾಯ್ತಂದೆಯರು, ಶಾಲೆಗಳಲ್ಲಿ ಶಿಕ್ಷಕ ವೃಂದ ಈ ವಿಷಯದ ಬಗ್ಗೆ ತೀವ್ರ ಗಮನ ಕೊಡಬೇಕಿದೆ. ಕನಿಷ್ಠ ಮುಂದಿನ ಪೀಳಿಗೆಗಳಲ್ಲಾದರೂ ನಾಗರೀಕ ಪ್ರಜ್ಞೆ ಮೂಡಿಸಬೇಕು.

### ನಾಗರೀಕ ಪ್ರಜ್ಞೆ ಎಂದರೇನು?

ಸಾಮಾನ್ಯ ಜನ ನಾಗರೀಕ ಪ್ರಜ್ಞೆ ಎಂದರೆ ಅರ್ಥಮಾಡಿಕೊಳ್ಳುವುದು ನಮ್ಮ ರಸ್ತೆ, ಮಾರ್ಕೆಟ್ ಸಾರ್ವಜನಿಕ ಸ್ಥಳವನ್ನು ಶುಚಿಯಾಗಿ ಇಟ್ಟುಕೊಳ್ಳುವುದೆಂದು. ಆದರೆ ನಾಗರೀಕ ಪ್ರಜ್ಞೆ ಈ ಮಿತಿಯನ್ನೂ ದಾಟಿದ್ದು. ಪರಸ್ಪರರನ್ನು ಗೌರವಿಸುವುದು, ಕಾನೂನನ್ನು ಪಾಲಿಸುವುದು, ಸಾರ್ವಜನಿಕ ಆಸ್ತಿಗೆ ಧಕ್ಕೆ ತರದಿರುವುದು, ಎಲ್ಲೆಡೆ ಶುಚಿತ್ವ ಕಾಪಾಡುವುದು ಮುಂತಾದ ಇನ್ನೂ ಅನೇಕ ಸಂಗತಿಗಳು ಸೇರಿ ನಾಗರೀಕ ಪ್ರಜ್ಞೆ ಎನ್ನಿಸಿಕೊಳ್ಳುತ್ತದೆ. ಒಟ್ಟಾರೆ ಸಾಮಾಜಿಕ ಸ್ವಾಸ್ಥ್ಯ ಕ್ಕೆ ಬೇಕಾದ ಎಲ್ಲಾ ಸಂಗತಿಗಳೂ ನಾಗರೀಕ ಪ್ರಜ್ಞೆಯ ಪರಿಧಿಯಲ್ಲಿ ಬರುತ್ತದೆ.

### ನಮ್ಮ ಇಂದಿನ ಸ್ಥಿತಿ

ಇದನ್ನು ನಮ್ಮ ಮನೆಯಿಂದಲೇ ಪ್ರಾರಂಭಿಸೋಣ. ಮನೆ ಕಸ ಗುಡಿಸಿ ರಸ್ತೆಗೆ ತಂದು ಹಾಕುತ್ತೇವೆ. ಮಹಡಿ ಮೇಲಿಂದ ಕಸವನ್ನು ರಸ್ತೆಗೆ ಎಸೆಯುತ್ತೇವೆ. ಕಾರು, ಸೈಕಲ್, ಸ್ಕೂಟರ್ ಅನ್ನು, ದನಕರುಗಳನ್ನು ಮನೆ ಮುಂದೆ ತೊಳೆದು ರಸ್ತೆಯನ್ನು ಕೊಚ್ಚೆ ಮಾಡುತ್ತೇವೆ, ಮಕ್ಕಳನ್ನು ಮನೆ ಮುಂದೆ ಆಟ ಆಡಲು ಬಿಡುತ್ತೇವೆ. ಪಕ್ಕದ ಮನೆಗೆ ಕೇಳುವಂತೆ ರೇಡಿಯೋ, ಟಿವಿ ಗಳನ್ನು ಹಾಕಿಕೊಂಡು ಅಲ್ಲಿರುವವರ ನೆಮ್ಮದಿ ಹಾಳುಮಾಡುತ್ತೇವೆ. ಸಣ್ಣ ಪುಟ್ಟ ಕಾರಣಕ್ಕೆ ನೆರೆಮನೆಯವರೊಂದಿಗೆ ಜಗಳ ಕಾಯುತ್ತೇವೆ. ಇದೆಲ್ಲಾ ನಮ್ಮ ಅನಾಗರೀಕತೆಯನ್ನು ತೋರಿಸುತ್ತದೆ ಅಲ್ಲವೇ?

### ಶಾಲೆಗಳಲ್ಲಿ

ಶಾಲೆಗಳಲ್ಲಿ ನಮ್ಮ ಮಕ್ಕಳಿಗೆ ನಾಗರೀಕ ಪ್ರಜ್ಞೆಯನ್ನು ಕಲಿಸದಿರುವುದರಿಂದ ತರಗತಿಯಲ್ಲಿ ಪೆನ್ಸಿಲ್‌ನಿಂದ ಗೀಚುವುದು, ಪೇಪರ್ ಹರಿದು ನೆಲದ ಮೇಲೆ ಹಾಕುವುದು, ಬೆಂಚಿನ ಮೇಲೆ ಹೆಸರು ಕೆತ್ತುವುದು, ಗೋಡೆ ಮೇಲೆ ಬರೆಯುವುದು, ಅಕ್ಕ ಪಕ್ಕದವರ ಪೆನ್ಸಿಲ್, ರಬ್ಬರ್, ಬ್ಲೇಡ್ ತೆಗೆದುಕೊಳ್ಳುವುದು, ಬೋರ್ಡ್ ಮೇಲೆ ಗೀಚುವುದು, ಊಟವನ್ನು ಚೆಲ್ಲುವುದು, ಟಾಯ್ಲೆಟ್ ಅನ್ನು ಸರಿಯಾಗಿ ಉಪಯೋಗಿಸದಿರುವುದು, ನಲ್ಲಿ ನೀರು ಬಿಟ್ಟು ಬರುವುದು, ಪ್ರಯೋಗಶಾಲೆಯ ವಸ್ತುಗಳನ್ನು ಹಾಳುಮಾಡುವುದು, ಹೀಗೆ ಅಶಿಸ್ತಿನ ನಡವಳಿಕೆಯ ಪಟ್ಟಿಯನ್ನು ಉದ್ದಕ್ಕೆ ಬೆಳೆಸಬಹುದು.

### ಸಾರ್ವಜನಿಕ ಸ್ಥಳಗಳಲ್ಲಿ (Public Places)

ನಮ್ಮ ಮನೆ ಮತ್ತು ಶಾಲೆಯ ಆವರಣ ಬಿಟ್ಟು ಉಳಿದೆಲ್ಲಾ ಜಾಗವನ್ನು ಅಂದರೆ, ಎಲ್ಲಾ ಸಾರ್ವಜನಿಕರಿಗೆ ಸೇರಿದ ಮೈದಾನ, ಪಾರ್ಕು, ರೈಲು ನಿಲ್ದಾಣ, ಬಸ್ ನಿಲ್ದಾಣ, ಸರ್ಕಾರಿ ಕಛೇರಿ ಮುಂತಾದವನ್ನೆಲ್ಲಾ ಸಾರ್ವಜನಿಕ ಸ್ಥಳ ಎಂದು ಕರೆಯುತ್ತೇವೆ. ಈ ಜಾಗದಲ್ಲಿ ನಮ್ಮ ವರ್ತನೆ ಹೇಗಿರುತ್ತದೆ?

ಎಲ್ಲೆಂದರಲ್ಲಿ ಮೂತ್ರ ಮಾಡುತ್ತೇವೆ, ಉಗುಳುತ್ತೇವೆ ರಸ್ತೆಯಲ್ಲಿ ಅಡ್ಡಾದಿಡ್ಡಿ ಗಾಡಿ ಓಡಿಸುತ್ತೇವೆ. ಬಸ್ ಮತ್ತು ರೈಲಿನಲ್ಲಿ ಪಯಣಿಸುವಾಗ ಅದರ ಸೀಟ್ ಅನ್ನು ಹರಿಯುತ್ತೇವೆ. ಅದರ ಗೋಡೆಯ ಮೇಲೆ ಗೀಚುತ್ತೇವೆ. ಕೂರಬಾರದ ಜಾಗದಲ್ಲಿ ಕೂರುತ್ತೇವೆ. ಸಹ ಪ್ರಯಾಣಿಕರೊಂದಿಗೆ ಅಸಭ್ಯವಾಗಿ ವರ್ತಿಸುತ್ತೇವೆ. ಟಿಕೆಟ್ ಇಲ್ಲದೇ ಪ್ರಯಾಣ ಮಾಡುತ್ತೇವೆ. ಬಸ್/ರೈಲನ್ನು ಹತ್ತುವಾಗ, ಇಳಿಯುವಾಗ ಒಬ್ಬರ ಮೇಲೊಬ್ಬರು ಬಿದ್ದು ನುಗ್ಗುತ್ತೇವೆ. ಕ್ಯೂ ಪಾಲಿಸುವುದು ನಮ್ಮ ರಕ್ತದಲ್ಲೇ ಇಲ್ಲ ! ಹೊರಗೆ ಯಾರ ಮೇಲಾದರೂ ಬಿದ್ದೀತು ಎಂಬ ಪರಿವೆಯೇ ಇಲ್ಲದೇ ಉಗುಳುತ್ತೇವೆ. ಪಾರ್ಕ್‌ನಲ್ಲಿ ಹುಲ್ಲುಹಾಸಿನ ಮೇಲೆ ನಡೆದಾಡುವುದು, ಹೂ ಕೀಳುವುದು, ಉಗುಳುವುದು, ಸರ್ಕಾರಿ ಕಚೇರಿಗೆ ತಡವಾಗಿ ಬರುವುದು, ಬೇಗ ಹೋಗುವುದು, ಅಲ್ಲಿ ಅನಾವಶ್ಯಕವಾಗಿ ದೀಪ ಉರಿಸುವುದು, ಫ್ಯಾನ್ ಹಾಕುವುದು, ಕ್ಷುಲ್ಲಕ ಕಾರಣಕ್ಕಾಗಿ ದಂಗೆ ಎಬ್ಬಿಸುವುದು, ಬಸ್ ರೈಲು ಸುಡುವುದು/ ಸಾರ್ವಜನಿಕ ಆಸ್ತಿ ನಾಶ ಮಾಡುವುದು, ಸಭೆ ಸಮಾರಂಭಗಳನ್ನು ತಡವಾಗಿ ಪ್ರಾರಂಭಿಸುವುದು. ಸಭೆಗಳಿಗೆ ತಡವಾಗಿ ಬರುವುದು, ಹೀಗೆ ಈ ಪಟ್ಟಿಯನ್ನು ಹನುಮಂತನ ಬಾಲದಂತೆ ಬೆಳೆಸಬಹುದು.

ಮನೆಯಾಗಲೀ, ಶಾಲೆಯಾಗಲೀ, ಸಾರ್ವಜನಿಕ ಸ್ಥಳವಾಗಲೀ ಮೇಲಿನ ಬಗೆಯ ನಮ್ಮ ವರ್ತನೆಗೆ ಅನಾಗರೀಕ ವರ್ತನೆ ಎಂದು ಕರೆಯುತ್ತಾರೆ.

ಮಾನವ ಕಾಡಿನಿಂದ ನಾಡಿಗೆ ನಡೆದು ಅದೆಷ್ಟೋ ಶತಮಾನಗಳು ಗತಿಸಿವೆ. ಇದನ್ನು ಜಗತ್ತಿನ ಬಹಳಷ್ಟು ದೇಶಗಳು ಅರಿತಿವೆ. ಅದಕ್ಕೆ ತಕ್ಕಂತೆ ತಮ್ಮನ್ನು ನಾಗರೀಕ ಸಮಾಜವಾಗಿ ರೂಪಿಸಿಕೊಂಡಿವೆ ಆದರೆ ಜಗತ್ತಿನ ಅತ್ಯಂತ ಪ್ರಾಚೀನ ನಾಗರೀಕತೆಯನ್ನು ಹೊಂದಿದ್ದೇವೆ ಎಂದು ಹೇಳಿಕೊಳ್ಳುವ ನಾವು ಅನಾಗರೀಕತೆಯ ಹಂತದಿಂದ ಮೇಲೆದ್ದಿಲ್ಲ . ಚೆನ್ನಾದ ವೇಷ ಭೂಷಣ, ಠುಸ್ ಪುಸ್ ಇಂಗ್ಲಿಷ್, ಸೆಂಟು ಮಿಂಟು ಇವಿಷ್ಟನ್ನೇ ನಾಗರೀಕತೆ ಎಂದುಕೊಂಡಿದ್ದೇವೆ.

ಹಾಗಾದರೆ ಈ ಸಮಸ್ಯೆಗೆ ಪರಿಹಾರವಿಲ್ಲವೇ?

ಮುಂದಿನ ಲೇಖನದಲ್ಲಿ ಪರಿಹಾರ ಹುಡುಕೋಣ.


ಎಚ್. ನಾಗಭೂಷಣರಾವ್
ಪೋಷಕರು, ಕರ್ನಾಟಕ ರಾಜ್ಯ
ಮಾಧ್ಯಮಿಕ ಶಿಕ್ಷಕ ಸಂಘ (ರಿ.)




# ದೆಹಲಿಯಲ್ಲಿ ರಾಷ್ಟ್ರೀಯ ಕಾರ್ಯಾಗಾರ





ದಿನಾಂಕ 15–6–2014 ರಂದು ಅಖಿಲ ಭಾರತ ರಾಷ್ಟ್ರೀಯ ಶೈಕ್ಷಿಕ ಸಂಘದ ವತಿಯಿಂದ ದೆಹಲಿಯಲ್ಲಿ ನಡೆದ 'ಜೀವನ ಮೌಲ್ಯಗಳು' ರಾಷ್ಟ್ರೀಯ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಕರ್ನಾಟಕದ ಪ್ರತಿನಿಧಿಗಳು.

Registered No. RNI 45459/85
RMP/KA/BGS-125/2012-14
Posted at Bangalore GPO
Bangalore - 560 001

JULY 2014
Date of Posting
20th or 21st of every month

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Sepecial) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ "ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ" ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

srushtidesigns@gmail.com